(1 ಗಂಟೆ 51 ನಿಮಿಷಕ್ಕೆ ಸದನ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿರ್ಧರಿಸಿತು).

(ಸಭೆಯು 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

8. ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ ಅಥವಾ ಪ್ರತಿಜ್ಞಾ ವಚನ ಸ್ವೀಕಾರ:–

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– "ಡಿ.ಕೆ. ಶಿವಕುಮಾರ್ ಎಂಬ ಹೆಸರಿನವನಾದ ನಾನು ವಿಧಾನ ಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ."

9. ಪ್ರಕಟಣೆ

ಅಧ್ಯಕ್ಷರು:– ಮೂಡಬಿದ್ರೆ ವಿಧಾನಸಭೆ ಸದಸ್ಯರಾದ ಶ್ರೀ ಕೆ. ಅಭಯಚಂದ್ರ ಅವರನ್ನು ವಿಧಾನ ಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿರುತ್ತಾರೆ. ಈ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ. ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಈ ದಿನ 14–6–2004ರಂದು ಪತ್ರವನ್ನು ನೀಡಿದ್ದು, ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ಪದಾಧಿಕಾರಿಗಳನ್ನಾಗಿ ಕೆಳಕಂಡ ಶಾಸಕರನ್ನು ನೇಮಕ ಮಾಡಲಾಗಿದೆಯೆಂದು ತಿಳಿಸಿರುತ್ತಾರೆ.

ಶ್ರೀಯುತರುಗಳಾದ: ಗೋವಿಂದ ಕಾರಜೋಳ, ಶಾಸಕರು (ಮುಧೋಳ) ಉಪ ನಾಯಕರು
ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರು (ಅಂಕೋಲ), ಕಾರ್ಯದರ್ಶಿ
ಕಟ್ಟಾಸುಬ್ರಮಣ್ಯನಾಯ್ಡು, ಶಾಸಕರು (ಶಿವಾಜಿನಗರ) ಮುಖ್ಯ ಸಚೇತಕರು
ನಾಗರಾಜಶೆಟ್ಟಿ, ಶಾಸಕರು (ಭಂಟ್ವಾಳ), ಕೋಶಾಧ್ಯಕ್ಷರು

10. ನಿಲುವಳಿ ಸೂಚನೆ (ಮುಂದು):

ವಿಷಯ: ಕೂಲಿಗಾಗಿ ಕಾಳು ಯೋಜನೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ

ಅಧ್ಯಕ್ಷರು:– ಈಗ ಏನು ನಿಲುವಳಿ ಸೂಚನೆ ಕೊಟ್ಟಿದ್ದಾರೆ ಅದರ ಮೇಲೆ ಶ್ರೀಯುತ ಜೆ.ಸಿ. ಮಾಧುಸ್ವಾಮಿಯವರು ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೇ,

ಶ್ರೀ ಬಸವರಾಜರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಮೇರೆಗೆ ಈ ಸದನದ ಮಾನ್ಯ ಸದಸ್ಯರಾದಂತಹ ಶ್ರೀ ಅರಗ ಜ್ಞಾನೇಂದ್ರರವರು ನಿಲುವಳಿ ಸೂಚನೆಯ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಅನ್ ಪಾರ್ಲಿಮೆಂಟರಿ ವರ್ಡ್ ಅಥವಾ ಜೊತೆಗೆ ಸರ್ಕಾರದ ಮೇಲೆ ಆಪಾದನೆಯನ್ನು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ "ನಾನು ಹೇಳುತ್ತೇನೆ ಇವತ್ತು XXX ಅವರು ಹೇಳಬೇಕಾಗುತ್ತದೆಂದು" ಎನ್ನುವ ಮಾತನ್ನು ಹೇಳಿದರು.

XXX ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ **ತೆಗೆದು ಹಾಕಲಾಗಿದೆ.**

ಇದು ಬಹಳ ಗಂಭೀರವಾದಂತಹ ಆಪಾದನೆ. ಅವರ ಹತ್ತಿರ ಸಾಕ್ಷಿ ಮತ್ತು ಪುರಾವೆಗಳು ಇದ್ದರೆ ಸದನಕ್ಕೆ ಅವರು ಒದಗಿಸಬೇಕಾಗುತ್ತದೆ. ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವರಿಗೆ ಅಪಾದನೆಯಲ್ಲಿ ಬಹಳ...

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಈ ಸದನದಲ್ಲಿ ಬೆಳಿಗ್ಗೆಯಿಂದಲೂ ಕಾರ್ಯಕಲಾಪಗಳು ನಡೆಯುತ್ತಿವೆ. ಅದರ ಮಧ್ಯೆ ತಾವು ಈ ಸದನವನ್ನು ಮಧ್ಯಾಹ್ನದ ಊಟಕ್ಕೆ ಸಭೆಯನ್ನು ಮುಂದೂಡಿ, ಕಳುಹಿಸಿಕೊಟ್ಟಿದ್ದೀರಿ. ಬೆಳಿಗ್ಗೆ ತಾವು ನಿಲುವಳಿ ಸೂಚನೆಯನ್ನು ಏನು ತೆಗೆದುಕೊಂಡಿದ್ದೀರಿ ಅದನ್ನು ಮಧ್ಯೆ ತಾವು ಬ್ರೇಕ್ ಮಾಡುವುದಕ್ಕೆ ಬರುವುದಿಲ್ಲ. ಚರ್ಚೆಯನ್ನು ತಾವು ಯಾವ ನಿಯಮಾವಳಿಗಳ ಪ್ರಕಾರ ಮಾಡಬೇಕು ಎನ್ನುವುದಕ್ಕೆ ತಾವು ಒಂದು ತೀರ್ಪು ಕೊಡಿ. ಚರ್ಚೆಯಾಗಲಿ, ಜೊತೆಗೆ ಅದು ಹಕ್ಕುಚುತಿ ಬೇರೆ ಏನೇ ಆಗಿದ್ದರೂ ಸಹ ಅವರು ನೋಟಿಸ್ ಕೊಟ್ಟ ಮೇಲೆ ತಾವು ಅದನ್ನು ಪರಿಶೀಲನೆ ಮಾಡಿ, ಅವರಿಗೆ ನೋಟಿಸ್ ಕೊಟ್ಟು, ಅವರಿಗೆ ಅವಕಾಶ ಮಾಡಿಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಈಗಾಗಲೇ ಚರ್ಚೆ ನಡೆಯುತ್ತಿರುವಂಥದ್ದರ ಮಧ್ಯೆದಲ್ಲಿ ತಾವು ಅವರಿಗೆ ಅವಕಾಶ ಮಾಡಿ ಕೊಟ್ಟರೆ ಬಹುಶಃ ಮುಂದಿನ ಕಾರ್ಯಕಲಾಪಕ್ಕೆ, ಮತ್ತು ಈ ನಿಲುವಳಿ ಸೂಚನೆಯ ಮಹತ್ವಕ್ಕೆ ಅಡ್ಡಿಯಾಗುತ್ತದೆ. ಅವರಿಗೆ ಸಾಕಷ್ಟು ಸ್ವಾತಂತ್ರ್ಯವಿದೆ. ನಾವು ಈ ಕಡೆಯಿಂದ ಯಾವುದೇ ಸದಸ್ಯರು ಹೇಳಿದ್ದರೂ ಸಹ ಅದು ಹಕ್ಕುಚ್ಯುತಿಯಾದರೆ ಅವರು ಖಂಡಿತವಾಗಿ ಬೇರೆ ಸಂದರ್ಭದಲ್ಲಿ ಅದನ್ನು ಪ್ರಸ್ತಾಪ ಮಾಡಬಹುದು. ತಾವು ನೋಟಿಸ್ ತೆಗೆದುಕೊಂಡು ತಾವು ಮಾಡಿ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಬೆಳಿಗ್ಗೆಯಿಂದ ನಡೆಯುತ್ತಿರುವಂತಹ ನಿಲುವಳಿ ಸೂಚನೆ ಬಗ್ಗೆ ಮಾತನಾಡುವುದಕ್ಕೆ ಪ್ರತಿಪಕ್ಷದ ಸದಸ್ಯರಿಗೆ ಉಳಿದಂತಹವರಿಗೆ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ತಾವು ಒಂದು ರೂಲಿಂಗ್ ಸಹ ನೀಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ನಾನು ಒಂದು ಕ್ರಿಯಾಲೋಪವನ್ನು ಎತ್ತಿದ್ದೆ. ಆದರೆ ಆಗ ಸದನವನ್ನು ತಾವು ಮುಂದೂಡಿದ್ದರಿಂದ ಆ ವಿಚಾರದಲ್ಲಿ ನನಗೆ ಅವಕಾಶ ಸಿಗಲಿಲ್ಲ. ಈಗ ನಾನು ತಮ್ಮ ಅನುಮತಿ ಯೊಂದಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ತರಹದ ಒಂದು ಗಂಭೀರ ಅಪಾಧನೆಯನ್ನು ಮಾನ್ಯ ಸದಸ್ಯರು ಸರ್ಕಾರದ ಮೇಲೆ ಮಾಡಿರುವಂತಹ ಸಂದರ್ಭದಲ್ಲಿ ಹಿಂದೆ ಹಲವಾರು ರೂಲಿಂಗ್ಸ್‌ಗಳೂ ಕೂಡ ಅಧ್ಯಕ್ಷರು ಮಾಡಿದ್ದಾರೆ. ಸಂಸ್ಥೆಗಳ ಮೇಲೆ, ವ್ಯಕ್ತಿಗಳ ಮೇಲೆ ಆಪಾದನೆ ಮಾಡಿದರೆ ಸದಸ್ಯರು ಯಾವ ರೀತಿ ನಡೆದುಕೊಳ್ಳಬೇಕು ಎಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ಅವರು ಏನು ಹೇಳಬೇಕೆಂದು ಇದ್ದಾರೆ ಅದನ್ನು ತಾವು ಲಿಖಿತ ಮೂಲಕ ತೆಗೆದುಕೊಂಡು ತಾವು ನೋಡಿ, ರೆಕಾರ್ಡ್‌ನ್ನು ಪರಿಶೀಲನೆ ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ಚರ್ಚೆ ಮಾಡಲು ತಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಈಗ ಮಧ್ಯೆದಲ್ಲಿ ಅದಕ್ಕೆ ತಾವು ಅವಕಾಶ ಕೊಡಬಾರದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೇ, ಅದು ಏನಾಯಿತು ಅಂದರೆ ಮಾನ್ಯ ಸದಸ್ಯರಾದ ಶ್ರೀ ಆರಗ ಜ್ಞಾನೇಂದ್ರರವರು ಮಾತನಾಡುತ್ತಿದ್ದರು. ಅವರು ಆ ವಾಕ್ಯಗಳನ್ನು ಹೇಳಿದ ಕೂಡಲೇ ನಾನು ಸಹ ಎದ್ದು ನಿಂತೆ. ಅವರು ಸಹ ಎದ್ದು ನಿಂತರು. ಅವರ ಅಭಿಪ್ರಾಯವನ್ನು ಹೇಳಲು ಪ್ರಯತ್ನ ಮಾಡಿದರು. ದುರಾದೃಷ್ಟವಶಾತ್ ಅಧ್ಯಕ್ಷರ ಗಮನ ಆ ಕಡೆ ಇತ್ತು, ನಾವು ಈ ಕಡೆ ಸೆಳೆಯಲು ಆಗಲಿಲ್ಲ. ಅಷ್ಟರೊಳಗಾಗಿ ಅವರು ಏನು ಮಾಡಿದರು ಸಭೆಯನ್ನು ಮುಂದೂಡಿದ್ದೇನೆಂದು ಹೇಳಿ ಪುನಃ 3–00ಗಂಟೆಗೆ ಸೇರುತ್ತಿದ್ದೇವೆಂದು ಹೇಳಿದರು. ನಮಗೆ ಸಿಗುತ್ತಿರುವಂತಹ ಅವಕಾಶವೇ ಇದು. ನಾವು ಪುನಃ ಇಲ್ಲಿ ಸೇರಿದ್ದೇವೆ. ಯಾವ ವಿಷಯವನ್ನು ಒಂದು ವೇಳೆ ಸಭೆಯನ್ನು ಮುಂದೂಡದೇ ಇದ್ದಿದ್ದರೆ ಆಗಲೇ ಪ್ರಸ್ತಾಪ ಮಾಡಬೇಕಾಗಿತ್ತು ಆ ವಿಷಯವನ್ನು ಈಗ ಮಾಡಲೇಬೇಕಾಗಿದೆ. ಇಲ್ಲದಿದ್ದರೆ ಅದು ಈ ಸಭೆಯ ನಡವಳಿಕೆಗಳ ಒಂದು ಭಾಗವಾಗುತ್ತದೆ. ಅವರು ಬಹಳ ಗಂಭೀರವಾದಂತಹ ಒಂದು ಆರೋಪವನ್ನು ಮಾಡಿದ್ದಾರೆ. ಮಾನ್ಯ ರಾಯರೆಡ್ಡಿಯವರಿಗೆ ನಾನು ಸಹಾಯ ಮಾಡಲಿಕ್ಕೆ ಅವರು ಸರ್ಕಾರದ ಮೇಲೆ ಹೇಳಲಿಲ್ಲ. ಕಾಂಗ್ರೆಸ್ ಪಕ್ಷ ಎಂದು ಹೇಳಿದರು. ಕಾಂಗ್ರೆಸ್ ಅಂದರೆ ಇದೊಂದು ದೊಡ್ಡ ರಾಷ್ಟ್ರೀಯ ಸಂಸ್ಥೆ. ಯಾವ ಕಾಂಗ್ರೆಸ್ ಅಲ್ ಇಂಡಿಯಾ ಕಾಂಗ್ರೆಸ್, ಸ್ಟೇಟ್ ಕಾಂಗ್ರೇಸೋ, ಅಲ್ಲಿನ ಪ್ರೆಸಿಡೆಂಟರೋ, ಕಾರ್ಯದರ್ಶಿಗಳೋ, ಯಾರು ತೆಗೆದುಕೊಂಡರು ಎಲ್ಲಿ ತೆಗೆದುಕೊಂಡರು, ಯಾವಾಗ ತೆಗೆದುಕೊಂಡರು, ಎಷ್ಟು ತೆಗೆದುಕೊಂಡರು, ರಸೀದಿ ಇದೆಯೇ, ಅದರ ಕಾಪಿ ನಿಮ್ಮಲ್ಲಿ ಏನಾದರೂ ಇದೆಯೇ? ಒಂದು ವೇಗ್ ಅಲಿಗೇಶನ್ ಅನ್ನು ಒಬ್ಬ ಜವಾಬ್ದಾರಿಯುತವಾದಂಥ ಸದನದ ಸದಸ್ಯರು ಒಂದು ವಿಷಯವನ್ನು ಮಂಡನೆ ಮಾಡುವಾಗ ಅಷ್ಟು ಗಂಭೀರವಾದ ಆರೋಪವನ್ನು ಮಾಡಿದಾಗ.

ಶ್ರೀ ವಾಟಾಳ್ ನಾಗರಾಜ್:– ಯಾರಾದರೂ ಹಣ ಪಡೆದುಕೊಂಡವರು ಈ ಕಾಲದಲ್ಲಿ ರಶೀದಿ ಕೊಡುತ್ತಾರೆ ಈ ಕಾಲದಲ್ಲಿ? ಇದು ಯಾವ ಕಾಲ? ಸತ್ಯ ಹರಿಶ್ಚಂದ್ರದ ಕಾಲದ್ದು ಇವರು ಹೇಳುತ್ತಿದ್ದಾರಲ್ಲಾ. ಬೇರೆಯದೆಲ್ಲಾ ಮಾತನಾಡಿ, ರಶೀದಿ ವಿಚಾರವನ್ನು ತಾವು ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ವಾಟಾಳ್ ನಾಗರಾಜ್‌ರವರೆ, according to the latest amendment to the People's Representation Act ರಶೀದಿಯನ್ನು ತೆಗೆದುಕೊಳ್ಳುವುದಕ್ಕೆ ಪಾರ್ಟಿಗೆ ಅಧಿಕಾರವಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅದು ಪಾರ್ಟಿಯ ಫಂಡ್‌ಗೆ, ಇಲ್ಲಿ ಕಮಿಷನ್‌ಗೆ ಯಾರಾದರೂ ರಶೀದಿಯನ್ನು ಕೊಡುತ್ತಾರಾ? ರಾಯರೆಡ್ಡಿಯವರೆ, ಲೇಟೆಸ್ಟ್ ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್‌ನಲ್ಲಿ ಯಾವುದೇ ಪೊಲಿಟಿಕಲ್ ಪಾರ್ಟಿ ಕಂಪನಿಗಳಿಂದ ಹಣವನ್ನು ತೆಗೆದುಕೊಂಡರೆ ರಶೀದಿಯನ್ನು ಕೊಡುತ್ತಾರೆ ಅವರು ಇಲ್ಲಿ ಹೇಳಿರುವುದು ಕಮಿಷನ್ ಬಗ್ಗೆ, ಕಮಿಷನ್‌ಗೆ ಯಾರಾದರೂ ರಶೀದಿಯನ್ನು ಕೊಡುತ್ತಾರಾ?

ಶ್ರೀ ವಾಟಾಳ್ ನಾಗರಾಜ್:– ಮಿಕ್ಕಿದ್ದು ಏನು ಬೇಕಾದರೂ ಮಾತನಾಡಲಿ ರಶೀದಿ ವಿಚಾರ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಹಿಂದಿನ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರ ಬಗ್ಗೆ ಇಡೀ ರಾಜ್ಯದಲ್ಲಿ ಒಂದು ಒಳ್ಳೆಯ ಅಭಿಪ್ರಾಯವಿದೆ, ಬಹಳ ಕೆಟ್ಟ ಕೇಸಿನ

ಬಗ್ಗೆ ತಾವು ವಕೀಲಿಯನ್ನು ವಹಿಸಬೇಡಿ. ಬಹಳ ಕೆಟ್ಟ ಕೇಸಿನ ಬಗ್ಗೆ ಇವರ್‍ಯಾಕೆ ವಕೀಲಿಕೆ ವಹಿಸಬೇಕು, ಅದು ಅವರಿಗೆ ಗೊತ್ತು, ಅದುದರಿಂದ ನಾನು ಹೇಳುತ್ತೇನೆ ನೀವು ಮಾತ್ರ ಇದರಲ್ಲಿ ಸಿಕ್ಕಿ ಹಾಕಿಕೊಳ್ಳಬೇಡಿ, ಅವರ್‍ಯಾರೊ ಸಿಕ್ಕಿ ಹಾಕಿಕೊಂಡಿದ್ದಾರೆ ಒದ್ದಾಡಲಿ, ನಿಮಗೇಕೆ ಈ ಸ್ಥಿತಿ ಬಂತು?

ಶ್ರೀ ವಾಟಾಳ್ ನಾಗರಾಜ್:- ವಕೀಲರಿಗು ಕೆಟ್ಟ ಕೇಸು, ಒಳ್ಳೆಯ ಕೇಸು ಎನ್ನುವುದಿಲ್ಲ, ಯಾವ ಕೇಸ್ ಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ವಕಾಲತ್ತು ಹಾಕುವುದೆಂದರೆ, ಸಂಭಾವನೆಯನ್ನು ಪಡೆದುಕೊಂಡು ಹಾಕಿಗುತ್ತಾರೆಂಬುದು ಪ್ರಸ್ತುತ. ನಾನು ಇಲ್ಲಿ ಅಡ್ವೋಕೇಟ್ ಮಾಡುತ್ತಿಲ್ಲ, ಫ್ಯಾಕ್ಟ್ ಏನಿದೆ ಅದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಈ ರಶೀದಿ ಇದೆಲ್ಲದರ ಬಗ್ಗೆ ಅವರು ತಮ್ಮ ತಮ್ಮ ಅನುಭವವನ್ನೆಲ್ಲಾ ಸದನದ ಮುಂದೆ ಇರಲಿ, ಚರ್ಚೆಯಾಗಲಿ, ನಿಮಗೆ ಗೊತ್ತಿರುವಂತೆ ನಾನು ತೆಗೆದುಕೊಂಡವನು ಅಲ್ಲ ರಶೀದಿಯನ್ನು ಕೊಟ್ಟವನೂ ಅಲ್ಲ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಬೇರೆ ಎಲ್ಲೊಲ್ಲೋ ಹೋಗುತ್ತಿದೆ. ತಾವು ಅಧ್ಯಕ್ಷರಾಗಿದ್ದೀರಿ. ಅಕ್ಕಿ ಹಗರಣ ಇಷ್ಟು ದೊಡ್ಡ ಹಗರಣ, ರಾಜ್ಯದ ಜನ ಕೇಳುತ್ತಿದ್ದಾರೆ, ಚರ್ಚೆ ಬೇರೆ ತಿರುವು ಪಡೆದು ಈ ವಿಷಯದ ಚರ್ಚೆಗೆ ಪ್ರಾಮುಖ್ಯತೆ ಕಡಿಮೆಯಾಗುವಂತೆ ಆಗಬಾರದು. ಆದುದರಿಂದ ಅಧ್ಯಕ್ಷರು, ಉಳಿದ ಸದಸ್ಯರು ಪ್ರಸ್ತಾಪ ಮಾಡಲಿದ್ದಾರೆ ಅವರಿಗೆ ಅವಕಾಶವನ್ನು ಕೊಡಬೇಕು, ನಾವು ಈ ವಿಷಯವನ್ನು ತಮಗೆ ಪುನವರಿಕೆ ಮಾಡಿಕೊಡಲು ಬಯಸುತ್ತೇವೆ, ವಿಸ್ತೃತವಾದ ಚರ್ಚೆಗೆ ಮುಂದೆ ತಾವು ಅವಕಾಶ ಮಾಡಿಕೊಡಬೇಕು, ಮಧ್ಯಂತರದಲ್ಲಿ ಬೇರೆ ಬೇರೆ ವಿಷಯಗಳ ಚರ್ಚೆಗೆ ಅವಕಾಶಕೊಟ್ಟು ದಯವಿಟ್ಟು ಈ ವಿಷಯದ ಗಾಂಭಿರ್ಯತೆಯನ್ನು ಕಡಿಮೆಯಾಗುವಂತೆ ಮಾಡಬಾರದೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ನಾನು ಕಾಗೇರಿಯವರಲ್ಲಿ ಒಂದು ಸಲಹೆ ಕೊಡುತ್ತೇನೆ. ತಾವು ಅನ್ಯಥಾ ಭಾವಿಸಬೇಡಿ, ನಮ್ಮ ಸಂಸದೀಯ ಕಲಾಪಗಳಲ್ಲಿ, ಒಂದು ವಿಷಯವನ್ನು ಪ್ರಸ್ತಾಪ ಮಾಡುವುದೇ ನಮ್ಮ ಜಾಣ್ಮೆಯ ಪರೀಕ್ಷೆ, ಈ ವಿಷಯವನ್ನು ಪಕ್ಕಕ್ಕೆ ಸರಿಸಬೇಕೆಂದಲ್ಲ. ಎಷ್ಟು ಗಂಭೀರವಾದ ವಿಷಯವನ್ನೂ ಕೂಡ, ಎಷ್ಟು ಇಂಟಲಿಜೆಂಟ್ ಆಗಿ ನಾವು ಪ್ರಸೆಂಟ್ ಮಾಡಬಹುದು, ಬಹಳ ಗಂಭೀರವಾದ ಆಲಿಗೇಷನ್ ಮಾಡಿದರೂ ಕೂಡ ಅವರು ಡಿಫೆಂಡ್ ಮಾಡಿಕೊಳ್ಳದ ರೀತಿ ಮಾಡುವುದೇ ನಿಮ್ಮ ನೈಪುಣ್ಯತೆ, ಅದಕ್ಕೆ ಉತ್ತರ ಹೇಳುವುದು ಅವರ ಜವಾಬ್ದಾರಿ. ತಾವು ಹಳೆಯ ರೆಕಾರ್ಡ್ಸ್ ತೆಗೆದುಕೊಂಡು ನೋಡಿ, ಮಾನ್ಯ ಗೋಪಾಲಗೌಡರು ಹೇಗೆ ಮಾತನಾಡುತ್ತಿದ್ದರು, ಕೆಲವು ಪಾರ್ಲಿಮೆಂಟ್‌ದ್ದು ತೆಗೆದು ಭೂಪೇಶ್ ಗುಪ್ತ ರಾಜ್ಯಸಭೆಯಲ್ಲಿ ಹೇಗೆ ಮಾತನಾಡುತ್ತಿದ್ದರೆಂಬುದನ್ನು ನೋಡಿ. ನಾವು ನೇರವಾಗಿ ಮೂದಲಿಸುವುದಿಲ್ಲ. ಸದನದಲ್ಲಿ ಅವೆಲ್ಲಾ ಇದ್ದರೆ ಕಲಾಪ ಇನ್ನು ಹೆಚ್ಚು ಮೆರಗು ಪಡೆದುಕೊಳ್ಳುವುದು, ಹೆಚ್ಚು ಸತ್ಯ ಹೊರಗೆ ಬರುವಂಥದ್ದು ಒಂದು ವೇಳೆ ಮಾನ್ಯ ಜ್ಞಾನೇಂದ್ರ ಅವರ ಹತ್ತಿರ ಹೆಚ್ಚು ಮಾಹಿತಿ ಇದ್ದರೆ ಅದೆಲ್ಲಾ ಹೊರಗೆ ಬರಲಿ. ಸಾರ್ವಜನಿಕ ದೃಷ್ಟಿಯಿಂದ ಯಾವುದೇ ಮಾಹಿತಿ ಈ ಸದನದ ಗಮನಕ್ಕೆ ಬಾರದೇ ಹೋಗಬಾರದು. ಆದರೆ ಮಾಹಿತಿನೇ ಇಲ್ಲದೆ ಒಂದು ಮಾತನ್ನು ಹೇಳಿದಾಗ, ನಾವು ಮಾತನಾಡಬೇಕಾಗುತ್ತದೆ. ಇವತ್ತು ನಾವೆಲ್ಲರೂ ಕೂಡ ಕಾಂಗ್ರೆಸ್ ವೇಷ, ಬಣ್ಣ ಅವೆಲ್ಲಾ ಬೇರೆ ಬೇರೆ ಪ್ರಶ್ನೆ. ನಾನು ಕಾಂಗ್ರೆಸ್ ಟಿಕೆಟ್ ಮೇಲೆ

ಆಯ್ಕೆಯಾಗಿ ಈ ಸದನಕ್ಕೆ ಬಂದಿರತಕ್ಕಂತಹವನು. ನೈಜವಾಗಿ ಕಾಂಗ್ರೆಸ್ ಮೇಲೆ ಒಂದು ಆಪಾದನೆ ಬಂದಾಗ ಒಬ್ಬ ಕಾಂಗ್ರೆಸ್ಸಗನಾಗಿ ನಾನು ನನ್ನ ಕರ್ತವ್ಯವನ್ನು ಮಾಡಬೇಕು. ನಿಜವಾಗಲೂ ಕಾಂಗ್ರೆಸ್ ಪಕ್ಷ ಇದರಲ್ಲಿ ಅಪರಾಧಿಯಾಗಿದ್ದರೆ, ಆ ಅಪರಾಧದಲ್ಲಿ ನಾನೂ ಕೂಡ ಭಾಗಿ, ಅಧಕ್ಕೆ ಏನು ಶಿಕ್ಷೆಯಾಗಬೇಕು. ಅದನ್ನು ನಾನೂ ಕೂಡ ಸ್ವೀಕಾರ ಮಾಡಲು ತಯಾರಾಗಬೇಕು, ಇದಕ್ಕೆ ಬೇರೆ ಬೇರೆ ಡೈಮೆನ್‌ಷನ್ಸ್‌ಗಳಿವೆ. ವಿಷಯವನ್ನು ಡೈವರ್ಟ್ ಮಾಡಬೇಕೆಂದಲ್ಲ, to be more accurate, to be more precise, to be more intelligent, ದಿ: ನಿಜಲಿಂಗಪ್ಪನವರನ್ನು ಕುರಿತು ಈ ಸದನದಲ್ಲೇ ಗೋಪಾಲಗೌಡರು ಹೇಳುತ್ತಾರೆ. ನಿಮ್ಮನ್ನು, ಆಡಳಿತ ಪಕ್ಷದವರನ್ನು ನಾನು ಮುಂಡೆಮಕ್ಕಳೆಂದು ಕರೆದರೆ ಅದು ಅನ್ ಪಾರ್ಲಿಮೆಂಟರಿ ಆಗುತ್ತದೆ, ಹಾಗಾಗಿ ನಾನು ಆ ರೀತಿ ಕರೆಯುವುದಿಲ್ಲ. ಆದರೆ ಮುತ್ತೈದೆಯರಿಗೆ ಇಂತಹ ಮಕ್ಕಳು ಇರುತ್ತಾರೆಂದು ಹೇಳಬಹುದಲ್ಲಾ ಅಧ್ಯಕ್ಷರೇ ಎಂದು ಕೇಳುತ್ತಾರೆ. They are all our models. ಸ್ವಲ್ಪ ಲೈಬ್ರರಿಗೆಲ್ಲಾ ಹೋಗಿ ಬಂದರೆ ನಮಗೂ ಖುಷಿಯಾಗುತ್ತದೆ.

+**ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):-** ಮಾನ್ಯ ಅಧ್ಯಕ್ಷರೆ, ಏನು ನಮ್ಮ ರಾಯರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ, ಇವರೇನು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಅದಕ್ಕಿಂತ ಈ ವಿಚಾರ ಪ್ರಾಮುಖ್ಯವಾಗಿ ಚರ್ಚೆಯಾಗಬೇಕು, ಈ ಚರ್ಚೆಗೆ ತಾವು ಅವಕಾಶ ಕೊಡಬೇಕು, ಇಲ್ಲೇನು 65 ಜನ ಕಾಂಗ್ರೆಸ್ ಪಕ್ಷದ ಶಾಸಕರು ಗೆದ್ದು ಬಂದಿದ್ದಾರೆ, ಇದು ಅವರ ಸ್ವಾಭಿಮಾನದ ಪ್ರಶ್ನೆ ಅವರ ವ್ಯಕ್ತಿತ್ವದ ಪ್ರಶ್ನೆ ಏನು ಕಾಂಗ್ರೆಸ್ ಪಕ್ಷಕ್ಕೆ ಇತಿಹಾಸವಿದೆ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟು, ಇವತ್ತೇನು ಈ ರಾಷ್ಟವನ್ನು ಆಳುತ್ತಿದೆ, ಆ ಪಕ್ಷದ ಚರಿತ್ರೆಯ ವಿಚಾರದಲ್ಲಿ ಇವತ್ತು ಇಲ್ಲಿ ಚರ್ಚೆ ನಡೆಯುತ್ತಿದೆ. ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಭ್ರಷ್ಟಾಚಾರದಲ್ಲಿ ಹಣ ಹೋಗಿದೆ ಹೇಗೆ ಹೋಗಿದೆ ಎಂದು ನಮ್ಮ ಮುಖಕ್ಕೆ ಲೋಪವನ್ನು ನೇರವಾಗಿ ಹಾಕುತ್ತಿದ್ದಾರೆ. ಆರಗಜ್ಞಾನೇಂದ್ರರವರೇನೂ ಹೊಸ ಸದಸ್ಯರಲ್ಲ, ಅವರೂ ಕೂಡ ಮೂರು ಭಾರಿ ಸದಸ್ಯರಾಗಿ ಆಯ್ಕೆಯಾಗಿ ಬಂದಿದ್ದಾರೆ, ಜನ ಅವರನ್ನು ಕಳುಹಿಸಿದ್ದಾರೆ. ಅವರು ಹೇಳುವಂತೆ ಈ ವಿಧಾನ ಸಭೆಗೆ ಈ ರಾಷ್ಟ್ರದ ದೊಡ್ಡ ದೊಡ್ಡ ನಾಯಕರನ್ನು ಆಯ್ಕೆ ಮಾಡಿದಂತಹ, ಅದು ತಮ್ಮ ಸ್ಥಾನದಲ್ಲಿ ಕುಳಿತು, ವಿವಿಧ ಸ್ಥಾನದಲ್ಲಿ ಕುಳಿತಿರುವಂತಹ ನಾಯಕರನ್ನು ಆಯ್ಕೆ ಮಾಡಿದಂತಹ ಜಿಲ್ಲೆಯಿಂದ ಬಂದಿದ್ದರೆ ಅವರ ಬಾಯಿಯಲ್ಲಿ ಇಂತಹ ಮಾತುಗಳು ಬರುವುದು ಅವರ ವೈಯಕ್ತಿಕವಾದುದ್ದಲ್ಲ, ಅವರ ಪಕ್ಷಕ್ಕೂ ಶೋಭೆತರುವಂತಹ ವಿಚಾರವಲ್ಲ. ಅದಕ್ಕೆ ತಾವು ಏನು ನಮ್ಮ ರಾಯರೆಡ್ಡಿಯವರು ವಿಷಯವಾಗಿ ಮಾತನಾಡುತ್ತಿದ್ದಾರೆ, ಅದಕ್ಕೆ ತಾವು ಮೊದಲು ಚರ್ಚೆಗೆ ಅವಕಾಶ ಕೊಡಬೇಕು, ಅವರು ಸರಿಯಾದ ರೀತಿಯಲ್ಲಿ ಈ ಸದನಕ್ಕೆ ಮಾಹಿತಿ ಕೊಡಬೇಕು, ಇದನ್ನು ಸಾಭೀತು ಮಾಡಿ ಅಮೇಲೆ ಮಿಕ್ಕ ವಿಚಾಗ. ಅಕ್ಕಿಯನ್ನು ಯಾರೂ ತಿನ್ನುವುದಿಲ್ಲ, ಅನ್ನವನ್ನು ಮಾತ್ರ ಊಟ ಮಾಡುತ್ತಾರೆ, ಅನ್ನವನ್ನು ಯಾರು ಊಟ ಮಾಡಿದ್ದಾರೆ ನೀವು ಊಟ ಮಾಡಿದಿರೊ ನಾವು ಊಟ ಮಾಡಿದೆವೊ, ಆಫೀಸರ್ ಊಟ ಮಾಡಿದರೊ, ಬೇರೆ ಯಾರು ಊಟ ಮಾಡಿದರೊ ಚರ್ಚೆ ಮಾಡೋಣ. ಆದರೆ ನೇರವಾಗಿ ನಮ್ಮ ಪಕ್ಷದ ವಿಚಾರದಲ್ಲಿ ತಾವು ಆರೋಪವನ್ನು ಮಾಡಿದ್ದೀರಿ, ಅದನ್ನು ಅವರು ಸಾಭೀತು ಮಾಡಲೇ ಬೇಕಾಗುತ್ತದೆ, ಸಾಭೀತು ಮಾಡುವ ವಿಚಾರಕ್ಕೆ ನಮಗೆ, ಅವರಿಗೆ ಮತ್ತು ವಿವಿಧ ಇಂಡಿಪೆಂಡೆಂಟ್ ಸದಸ್ಯರಿದ್ದಾರೆ,

ಬೇರೆ ಪಕ್ಷದವರಿದ್ದಾರೆ, ಅವರ ಅಪಾರಾದ ಅನುಭವದಿಂದ ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ, ಇದಕ್ಕೆ ತಾವು ದಯವಿಟ್ಟು ಅನುಮತಿಯನ್ನು ಕೊಡಬೇಕೆಂದು ನಾನು 65 ಜನ ಶಾಸಕರ ಪರವಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಆರಗಜ್ಞಾನೇಂದ್ರ ಹೇಳಿರುವುದು, ಅಕ್ಕಿಯ ಮಾರಾಟದಿಂದ XXX XXX ಸಂಗ್ರಹವಾಗಿದ್ದರೆ ಸಂಗ್ರಹವಾಗಿದೆ ಎನ್ನಿ ಇಲ್ಲವೆಂದರೆ ಇಲ್ಲವೆನ್ನಿ ನೀವು, ನಾವು ನಿಮಗೆ ಆರೋಪ ಮಾಡಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ಏನು ಮಾತನಾಡಿದರು ಎನ್ನುವುದನ್ನು ತಾವು ಓದಿ.... ಏನು ಸಂಗ್ರಹ ಮಾಡಿದರೆನ್ನುವುದನ್ನು ಓದಿ....

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮಗೆ ದೊರೆತಿರುವ ಮಾಹಿತಿಯ ಪ್ರಕಾರ ಈ ರೀತಿ ಸಂಗ್ರಹವಾಗಿದೆ ಎಂದಿದ್ದೇವೆ, ಸಂಗ್ರಹ ಮಾಡಿದ್ದರೆ ಸಂಗ್ರಹ ಮಾಡಿದ್ದೇವೆಂದು ಹೇಳಿ, ಇಲ್ಲವೆಂದರೆ ಇಲ್ಲವೆಂದು ಹೇಳಿ. ಅದಕ್ಕೆ ನಿಮಗೆ ಅನುಕೂಲವಾಗಲೆಂದು ನಾನು ಹೇಳಿದೆ, ಫಂಡ್ ಯಾರ ಹತ್ತಿರ ಇರುತ್ತದೆ, ಕಾಂಗ್ರೆಸ್ ಅಧ್ಯಕ್ಷರು ಫಂಡ್ ಖರ್ಚು ಮಾಡಬೇಕು ಅಥವಾ ಪಕ್ಷದ ಮುಖ್ಯಮಂತ್ರಿಯಾದರು ಆ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು, ಕಾಂಗ್ರೆಸ್ ಅಧ್ಯಕ್ಷರೂ, ಇಲ್ಲ, ಮಾಜಿ ಮುಖ್ಯಮಂತ್ರಿಗಳು ಇಲ್ಲ, ಅವರು ಬಂದ ಮೇಲೆ ಅಕೌಂಟ್ ಕೇಳೋಣಪ್ಪ, ಇವರನ್ನು ಏಕೆ ಕೇಳುತ್ತೀರೆಂದು ನಾನು ಜ್ಞಾನೇಂದ್ರರವರಿಗೆ ಹೇಳಿದ್ದೇನೆ. ಆದುದರಿಂದ ನಾವು ಮಾಹಿತಿಯನ್ನು ಕೇಳಿದ್ದೇವೆ, ಆ ಬಗ್ಗೆ, ನಾವು ಒಂದು ಗಂಟೆ ಚರ್ಚೆ ಮಾಡಲು ನಾವು ತಯಾರಿದ್ದೇವೆ; ಅದು ಹಕ್ಕುಚ್ಯುತಿಯಾಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ನಾವು ಪಾರ್ಟ್ ಅಂಡ್ ಪಾರ್ಸಲ್, ಇದಕ್ಕೆ ಮುಖ್ಯಮಂತ್ರಿ ಬೇಡ ಅಧ್ಯಕ್ಷರು ಬೇಡ ನಮ್ಮನ್ನು ಕಳುಹಿಸಿದ್ದಾರೆ ಆ ಪಕ್ಷದ ಪರವಾಗಿ ನಾವು ಇಲ್ಲಿ ಬಂದಿದ್ದೇವೆ ಸ್ವಾಮಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ನಾನು ಹಕ್ಕುಚ್ಯುತಿ ಎಂದು ಹೇಳಲಿಲ್ಲ...

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮ್ಮ ಕಾಲದಲ್ಲಿ ಲಕ್ಷಾಂತರ ಟನ್ ಅಕ್ಕಿ ಮಾರಾಟ-ವಾಗುತ್ತದೆ, ಇದು ಎಲ್ಲಿ ಹೋಯಿತು? ನೀವು ಕೇಂದ್ರ ಸರ್ಕಾರಕ್ಕೆ ಕೂಲಿ ಕಾರ್ಮಿಕರಿಗೆ ಕೊಟ್ಟಿದ್ದೇವೆ ಎಂದು ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಟ್ಟಿದ್ದೀರಿ ಇದು ದ್ರೋಹವಲ್ಲವೆ? ಜನರಿಗೆ ಮೋಸ ಮಾಡಿದಂತಹ ವ್ಯವಹಾರವಲ್ಲವೆ ಇದು? ಹೆಬ್ಬೆಟ್ಟು ಒತ್ತಿಸಿಕೊಂಡು ಅಕ್ಕಿ ಮಾರಾಟ ಮಾಡಿದ್ದೀರಿ ಎನ್ನುವ ಭಾವನೆ ಕೇಳುವುದಕ್ಕೆ ಜನರು ನಮ್ಮನ್ನು ಇಲ್ಲಿಗೆ ಕಳುಹಿಸಿರುವುದು.

ಶ್ರೀ ಬಸವರಾಜ ರಾಯರೆಡ್ಡಿ:- ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪನವರು ನಿಲುವಳಿ ಸೂಚನೆಯನ್ನು ತಂದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಆರಗಜ್ಞಾನೇಂದ್ರ, ಅವರು ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ ಅವರೆ ಹೇಳಿದರು, "ಮಾನ್ಯ ಅಧ್ಯಕ್ಷರೆ, ಮಾನ್ಯ ಆರಗಜ್ಞಾನೇಂದ್ರರವರು ಹೇಳಿದ್ದು ಸರಿಯಲ್ಲ ಏಕೆಂದರೆ, ಇಲ್ಲಿ ಕಾಂಗ್ರೆಸ್ ಅಧ್ಯಕ್ಷರು ಇಲ್ಲ, ಮಾಜಿ ಮುಖ್ಯಮಂತ್ರಿಗಳು ಇಲ್ಲ, ಲೆಕ್ಕವೆಲ್ಲಾ ಅವರ ಹತ್ತಿರ ಇದೆ. ಇವರನ್ನು ಲೆಕ್ಕ

XXX ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಕೇಳಿದರೆ ಹೇಗೆ ತಿಳಿಯುತ್ತದೆ" ಎನ್ನುವಂಥ ಗಂಭೀರವಾದಂಥ ವ್ಯಂಗ್ಯ ರೀತಿಯ ಒಂದು ಅಪಾದನೆಯನ್ನೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಹೇಳಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:–ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಹೇಳಿರುವುದು ಸರಿ ಇದೆ. ಅವರ ಹತ್ತಿರ ಲೆಕ್ಕ ಇದೆ. ಅದನ್ನು ಅವರು ಕೊಡಲಿ ಎಂದು ಹೇಳಿದ್ದಾರೆ. ಬೇರೆ ಏನನ್ನೂ ಅವರು ಹೇಳಲಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಕೊಟ್ಟವರು ಅವರು. ತೆಗೆದುಕೊಂಡವರು ಇವರು ಸ್ವಾಮಿ. ನಾವು ಎಲ್ಲಿ ಲೆಕ್ಕವನ್ನು ಕೊಡೋಣ? ಇದನ್ನು ಜನರು ಹೇಳುತ್ತಿದ್ದಾರೆ. ನಾನಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– ಹೀಗಾಗಿ Ruling and Observations by the Chair 1992–94 ಇದರಲ್ಲಿ ಹಿಂದೆ ಮಾನ್ಯ ಯಡಿಯೂರಪ್ಪನವರೇ ಒಂದು ಅಪಾದನೆಯನ್ನು ಮಾಡಿದ್ದಾರೆ. ಸೆಕ್ಷನ್ 76ರಲ್ಲಿ ಶ್ರೀ ಯಡಿಯೂರಪ್ಪನವರು "ರಾಜ್ಯದ ಬೊಕ್ಕಸಕ್ಕೆ ಅಬ್ಕಾರಿ ಗುತ್ತಿಗೆದಾರರಿಂದ ಬರುವಂಥ ಕೋಟ್ಯಾಂತರ ರೂಪಾಯಿಗಳ ವಸೂಲಾತಿಯನ್ನು ಮನ್ನಾ ಮಾಡುವ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನನ್ನು ಮಾಡುವಾಗ ಒಂದು ಕೋಟಿ ರೂಪಾಯಿಗಳು ಸೆಕೆಂಡ್ಸ್ ಮೂಲಕ ಸೇರಿ ಹೋಗುತ್ತಿರುವ ದೊಡ್ಡ ಹಗರಣವಿದೆ ಎಂದು ಹೇಳುವಾಗ ಅಧ್ಯಕ್ಷರು ಈ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. "You cannot make such sweeping allegations" ಎನ್ನುವಂಥ ಮಾತನ್ನು ಅಧ್ಯಕ್ಷರು ಹೇಳಿ ಈ ಪದವನ್ನು ಕಡತದಿಂದ ತೆಗೆಸಿಹಾಕಿದ್ದಾರೆ. ಅದಕ್ಕೆ ಈ ಸಂದರ್ಭದಲ್ಲಿ ಹಿಂದಿನ ಚೇರ್ ರೂಲಿಂಗ್ ಏನಾಗಿದೆ, ಅದರ ಪ್ರಕಾರ ಕಡತದಿಂದ ಈ ಎರಡೂ ಶಬ್ದಗಳನ್ನು ವಾಪಸ್ ತೆಗೆಸಬೇಕೆಂದುತಮ್ಮಲ್ಲಿ ಮನವಿಯನ್ನು ಮಾಡುತ್ತೇವೆ. ಮತ್ತು ಇಂಥ ಗಂಭೀರವಾದ ಆಪಾದನೆಯನ್ನು ಮಾಡಿರುವಂಥ ಮಾನ್ಯ ಸದಸ್ಯರುಗಳು ಈ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಆಪಾದನೆಯನ್ನು ಸಾಬೀತು ಮಾಡುವುದಕ್ಕೆ ಪುರಾವೆಗಳನ್ನು ಈ ಸದನಕ್ಕೆ ಒದಗಿಸಬೇಕೆಂದು ನಾನು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಜ್ಞಾನೇಂದ್ರರವರು ಮೂರನೇ ಬಾರಿಗೆ ಶಾಸಕರಾಗಿದ್ದಾರೆ. ಅವರು ಮಾತನಾಡುವ ಕಾಲದಲ್ಲಿ ಇವತ್ತು XXX XXX ಎಂದು ಅವರು ಹೇಳಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಈಗ ಈ ರೀತಿ ಈ ಅಕ್ಕಿ ಮಾರಾಟದಿಂದ ನಮಗೆ ಯಾವುದೇ ರೀತಿ ಕಾಂಗ್ರೆಸ್ ಫಂಡ್‌ಗೆ ಜಮಾ ಆಗಿಲ್ಲವೆಂದರೆ ಇಲ್ಲ ಎಂದು ಹೇಳಿ. ಆಗಿದ್ದರೆ ಆಗಿದೆ ಎಂದು ಹೇಳಿ. ನಾವು ನೀವು ತೆಗೆದುಕೊಂಡಿದ್ದೀರಿ ಎಂದು ಆರೋಪ ಮಾಡುತ್ತಿಲ್ಲ. ಈ ತರಹ ಇದೆ, ನೀವು ಜಮಾ ಆಗಿದೆಯೋ ಇಲ್ಲವೋ ಹೇಳಿ ಎಂದು ಕೇಳಿದ್ದೇವೆ. ಇದನ್ನು ಕೇಳುವುದಕ್ಕೆ ನಮಗೆ ಅಧಿಕಾರ ಇದೆ. ಜನರು ಕಳುಹಿಸಿರುವುದೇ ನಮ್ಮನ್ನು ಅದಕ್ಕೆಂದೇ. ಅದಕ್ಕೆ ನಾನು ಅಕೌಂಟ್ ಕೊಡುವುದಕ್ಕೆ ಯಾರು ಇಲ್ಲವೆಂದು ಹೇಳಿದೆ. ನಿಮ್ಮ ಹತ್ತಿರ ಯಾರ ಹತ್ತಿರವಾದರೂ ಅಕೌಂಟ್ ಇದ್ದರೆ ಈ ಅಕ್ಕಿ ಬಾಬ್ತು ಜಮಾ ಆಗಿದೆಯೋ ಇಲ್ಲವೋ ಎಂದು ಹೇಳಿ. ಆಗಿದ್ದರೆ ಆಗಿದೆ ಎಂದು ಹೇಳಿ. ಇಲ್ಲದಿದ್ದರೆ ಇಲ್ಲವೆಂದು ಹೇಳಿ.

XXX ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಇದು ಉತ್ತರ ಕೊಡುವ ಪ್ರಶ್ನೆ ಅಲ್ಲ. ಅಪಾದನೆಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗ ನಾವು ಹೇಳಿರುವಂಥದ್ದನ್ನು ಸ್ಪಷ್ಟವಾಗಿ ನಿರಾಕರಣೆ ಮಾಡುತ್ತಿಲ್ಲ. ಅಥವಾ ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಇಲ್ಲ. ಅದು ಚರ್ಚೆಯಾಗಲಿ. ರೂಲಿಂಗನ್ನು ಕೊಡುವುದಕ್ಕೆ ತಮಗೆ ಅಧಿಕಾರ ಇದೆ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ನಾನು ಮೂರು ಸಾರಿ ಆಯ್ಕೆಯಾಗಿ ಬಂದಿದ್ದೇನೆ. ಅವರು ಹೇಳಿದಂತೆ ಈ ಸದನಕ್ಕೆ ಹೊಸಬನಲ್ಲ. ನಾವೇನು ಮಾಡಬೇಕೆಂದು ಹೇಳಿ ಪ್ರಜ್ಞೆಯನ್ನು ಇಟ್ಟುಕೊಂಡೇ ನಾನು ಮಾತನಾಡಿದ್ದೇನೆ. ನನ್ನ ಇರಾದೆ ಏನೆಂದರೆ ಈ ಕೂಲಿಗಾಗಿ ಕಾಳು ಅಕ್ಕಿ ಬಡವರಿಗೆ ಹೋಗುವುದು. ಅವರು ಹಸಿವಿನಿಂದ ನರಳಿ ಸಾಯುತ್ತಾರೆ ಎಂದು ಹೇಳಿ ಈ ಅಕ್ಕಿಯನ್ನು ಕೊಟ್ಟು ಕೆಲಸ ಮಾಡುವುದಕ್ಕೆ ಕೊಟ್ಟಿರುವುದು. ನ್ಯಾಯಬೆಲೆ ಅಂಗಡಿಗಳಲ್ಲಿ ಬಿಪಿಎಲ್ ಕಾರ್ಡುಗಳಿಗೆ, ಎಪಿಎಲ್ ಕಾಡುಗಳಿಗೆ ಕೊಟ್ಟಿರುವ ಅಕ್ಕಿ, ಪಂಚಾಯಿತಿಗಳಿಗೆ ಅಲ್ಲಿ ನಿರುದ್ಯೋಗವಾಗಿದೆ, ನಮ್ಮ ಹಳ್ಳಿಗಳಲ್ಲಿ ಉದ್ಯೋಗ ಸಿಗುತ್ತಿಲ್ಲ, ಮಳೆ ನೀರಿಲ್ಲದೆ ಅಂಡರ್‌ಗ್ರೌಂಡ್ ವಾಟರ್ ಹೊರಟು ಹೋಗಿ ಇವತ್ತು ಬರ ಬಂದಿದೆ, ಜನರು ಗುಳೆ ಹೋಗುತ್ತಿದ್ದಾರೆ, ಅಲ್ಲಿ ನಿರುದ್ಯೋಗ ಸಮಸ್ಯೆ ಬರಬಾರದು ಎಂದು ಹೇಳಿ ಕೊಟ್ಟಿರುವುದು.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಅದೆಲ್ಲಾ ಚರ್ಚೆ ಮಾಡುವಿರಂತೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅವರು ಹೇಳುವುದನ್ನು ಕೇಳಿ. ಅವರು ಪೂರ್ಣವಾಗಿ ಹೇಳುವುದಕ್ಕೂ ಅವಕಾಶ ಕೊಡುತ್ತಿಲ್ಲವಲ್ಲಾ. ಅಕ್ಕಿ ಹಗರಣವನ್ನು ಮುಚ್ಚುವುದಕ್ಕೆ ಹೊರಗೆ ಮುಚ್ಚಿಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅಕ್ಕಿ ಹಗರಣದಲ್ಲಿ ಕಾಂಗ್ರೆಸ್ ಭಾಗಿಯಾಗಿದೆ ಎಂದು ಇಡೀ ರಾಜ್ಯಕ್ಕೆ ಗೊತ್ತಿದೆ.

ಶ್ರೀ ಬಸವರಾಜರಾಯರೆಡ್ಡಿ:- ಇದಲ್ಲಿ ಬಿ.ಜೆ.ಪಿ. ಕೂಡ ಶಾಮೀಲಾಗಿದೆ. Port Authority India comes under the Control of Government of India ಅವೊತ್ತು ಬಿ.ಜೆ.ಪಿ. ಅಧಿಕಾರದಲ್ಲಿತ್ತು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಮೊದಲು ಆ ಮಾತುಗಳು ಇಲ್ಲಿ ತೀರ್ಮಾನವಾಗಬೇಕು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ನಾವು 25–30 ಜನರು ಇದ್ದಾಗ ಇವರ ಧ್ವನಿ ಕೇಳಿ ಓಡಲಿಲ್ಲ. ಈಗ 79 ಜನರಿದ್ದೇವೆ. ನಾವು ಓಡುವುದಿಲ್ಲ. ಧ್ವನಿ ದೊಡ್ಡದು ಮಾಡುವುದು ಬೇಡ. ಅಥವಾ ಇಲ್ಲಿ ಯಾರಿಗೂ ಕುಣಿಸುವುದೂ ಬೇಡ. ತೋಳ್ಬಲ ಅಥವಾ ಗಂಟಲುಬಲ ತೋರಿಸುವುದು ಬೇಡ. ಆರ್ಗ್ಯುಮೆಂಟ್ ಮಾಡಲಿ. ನಾವೂ ಕೂಡ ಮಾಡಲಿಕ್ಕೆ ತಯಾರಿದ್ದೇವೆ. ಬಡವರಿಗೆ ಕೊಟ್ಟಂಥ ಅಕ್ಕಿ ಅದು, ಆಗ ಅಧಿಕಾರದಲ್ಲಿ ಯಾರಿದ್ದರು? ನೀವೇ ತಾನೇ ಇದ್ದದ್ದು

ಮಾನ್ಯ ಮಂತ್ರಿಗಳಾಗಿ. ನಿಮ್ಮದೇ ಸರ್ಕಾರ ಇದ್ದದ್ದಲ್ಲವೇ? ಯಾವ ಡೇಟ್‌ನಲ್ಲಿ ಹೋಯಿತು? ನಿಮಗೆ ಗೊತ್ತಿಲ್ಲದೇ ಅದೇಗೆ ಹೋಯಿತು? ಇವತ್ತು ಬಡವರಿಗೆ ಹಳ್ಳಿ ಹಳ್ಳಿಗೆ ಕೊಟ್ಟಂಥ ಅಕ್ಕಿ ಮಂಗಳೂರು ಪೋರ್ಟ್‌ನಲ್ಲಿ ಹೋಗಿ ಹೇಗೆ ಸ್ಟಾಕ್ ಆಗುತ್ತದೆ? ಲಕ್ಷಗಟ್ಟಲೆ ಟನ್ ಅಕ್ಕಿ. ನೀವೆಲ್ಲಿಗೆ ಹೋಗಿದ್ದಿರಿ? ನಿಮ್ಮ ಇಂಟೆಲಿಜೆನ್ಸ್ ಎಲ್ಲಿಗೆ ಹೋಗಿತ್ತು? ನಿಮ್ಮ ಪೋಲೀಸ್ ಎಲ್ಲಿಗೆ ಹೋಗಿತ್ತು? ಎಪಿಎಂಸಿ ಗೇಟ್ ಎಲ್ಲಿಗೆ ಹೋಗಿತ್ತು? ಸೇಲ್ಸ್‌ಟ್ಯಾಕ್ಸ್ ಟೋಲ್‌ಗೇಟ್‌ಗಳು ಎಲ್ಲಿಗೆ ಹೋಗಿತ್ತು? ಹಾಗಾದರೆ ನಿಮಗೆ ಗೊತ್ತಿಲ್ಲದೆ ಅಕ್ಕಿ ಹೋಯಿತೋ? ಹಾಗಾದರೆ ನೀವ್ಯಾಕೆ ಅಧಿಕಾರದಲ್ಲಿದಿರಿ? ಏನು ನೀವು ಹೇಳಿದಿರಿ, ನಮ್ಮ ಪಕ್ಷ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂಥ ಪಕ್ಷ ಎಂದಿರಿ. ಬಹಳ ಜನ ಸ್ವಾತಂತ್ರ್ಯ ತಂದುಕೊಟ್ಟಂಥ ಸಂಬಂಧದಲ್ಲಿ ಇದ್ದವರಲ್ಲ. ಆ ಸ್ವಾತಂತ್ರ್ಯ ತಂದುಕೊಟ್ಟಂಥ ಕಾಂಗ್ರೆಸ್‌ನವರ ಬಗ್ಗೆ ಭಾರೀ ಗೌರವ ಇದೆ. ನೀವ್ಯಾಕೆ ಮಾತನಾಡುತ್ತೀರಿ? ನಿಮ್ಮ ಬಣ್ಣಗಳು ಬಯಲಾಗಿದೆ. ಆ ಕಾಂಗ್ರೆಸ್‌ನ ಮಾನವನ್ನು ನೀವು ಇವತ್ತು ಹರಾಜು ಮಾಡಿದ್ದೀರಿ? ಯಾವ ಕಾಂಗ್ರೆಸ್? ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಕಾಂಗ್ರೆಸ್ಸಾ ನಿಮ್ಮದು? ಹಾಗಾದರೆ ಜನರು ನಿಮ್ಮನ್ನು ಏಕೆ 64ಕ್ಕೆ ಇಳಿಸಿದರು? ಸ್ವಾಮಿ, ಇವರಿಗೆ ಗೊತ್ತಿಲ್ಲದೇನೇ ಅಕ್ಕಿ ಹೋಗಲಿಲ್ಲ, ಕಾಂಗ್ರೆಸ್‌ನ ಬಗ್ಗೆ ಹೇಳಿದ್ದೇನೆಂದರೆ ನಿಮ್ಮ ಪಕ್ಷ ಆಡಳಿತದಲ್ಲಿತ್ತು, ಅವತ್ತು ಈ ರಾಜ್ಯವನ್ನು ನಿಮ್ಮ ಪಕ್ಷ ಆಳುತ್ತಿತ್ತು.

ಶ್ರೀ ಬಸವರಾಜ ರಾಯರೆಡ್ಡಿ:— ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರಲಿಲ್ಲವೇ?

ಶ್ರೀ ಆರಗ ಜ್ಞಾನೇಂದ್ರ:— ಈ ಹೊಣೆಯನ್ನು ಅವರು ಹೊತ್ತುಕೊಳ್ಳಬೇಕಾಗುತ್ತದೆ. ಇವತ್ತು ಲೆಕ್ಕಾಚಾರ ಕೇಳುವುದಕ್ಕೆ ಶಾಸಕನಾಗಿ ನಾನು ನಿಂತಿದ್ದೇನೆ. ಅದನ್ನು ಕೇಳುವುದಕ್ಕೆ ಕಟ್ಟಕಡೆಯ ಮತದಾರನಿಗೂ ಕೂಡ ಹಕ್ಕಿದೆ. ಎಷ್ಟು ಜಮಾ ಆಯಿತು, ನಿಮ್ಮ ಪಕ್ಷದ ನಿಧಿಗೆ ಎಷ್ಟು ಜಮಾ ಆಯಿತು? ಇದನ್ನು ಕೇಳುತ್ತಾರೆ. ಇಲ್ಲದಿದ್ದರೆ ನೀವು ಜವಾಬ್ದಾರಿಯಿಂದ ರಾಜ್ಯವನ್ನು ಆಳಬೇಕಾಗಿತ್ತು. ಇದನ್ನು ಹೇಳಿ ಹೆದರಿಸಿ ಈ ಚರ್ಚೆಯನ್ನು ಅಡ್ಡದಾರಿಗೆ ಎಳೆಯಬೇಡಿ. ಅಧ್ಯಕ್ಷರೇ, ತಾವು ವಿವರವಾದ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ (ಕೃಷಿ ಮಂತ್ರಿಗಳು):— ಮಾನ್ಯ ಜ್ಞಾನೇಂದ್ರರವರೇ, ಒಂದು ನಿಮಿಷ ತಾವು ಯೀಲ್ಡ್ ಆಗಿ. ಆಮೇಲೆ ನೀವು ಮಾತನಾಡಿ.

(ಗೊಂದಲ)

ಅಧ್ಯಕ್ಷರು:— ಇದು ಶಾಸನ ಸಭೆಯ ಚರ್ಚೆಯೋ ಅಥವಾ ಬೇರೆ ರೀತಿಯ ಚರ್ಚೆಯೋ ನನಗಂತು ಅರ್ಥವಾಗುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ:— ಯಾವ ನಿಯಮಾವಳಿ ಪ್ರಕಾರ ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಎನ್ನುವಂಥದ್ದು ನನಗೆ ಬೇಕು. ತಮಗೆ ಅವರು ನೋಟೀಸನ್ನು ಕೊಟ್ಟಿದ್ದಾರಾ? ಯಾವ ನಿಯಮಾವಳಿ ಪ್ರಕಾರ ಅವರು ಚರ್ಚೆಯನ್ನು ಆರಂಭಿಸುತ್ತಿದ್ದಾರೆ? ಅದನ್ನು ಅವರು ಸೆಪರೇಟಾಗಿ ತರಲಿ. ತಮಗೆ ನೋಟೀಸನ್ನು ಕೊಡಲಿ. ತಾವು ಅನುಮತಿಯನ್ನು ಕೊಡಿ. ಇದಕ್ಕೇನು ಯಾರೇನು ಹೆದರಿ ಓಡಿ ಹೋಗುವುದಿಲ್ಲ. ನಮ್ಮ ಹತ್ತಿರವೂ ಅನೇಕ ಬೇರೆ ಬೇರೆ ರೀತಿ ದಾಖಲಾತಿಗಳು ಇದ್ದಾವೆ. ನೀವೇಕೆ ಅಕ್ಕಿಯನ್ನು ಕಳುಹಿಸಿದಿರಿ? ಯಾರ್ಯಾರು ಶಾಮೀಲಾಗಿದ್ದಾರೆ? ನಾನು ಅದಕ್ಕೇನೆ

ಮಾನ್ಯ ಅಧ್ಯಕ್ಷರಿಗೆ ವಿನಂತಿಯನ್ನು ಮಾಡಿಕೊಂಡೆ. ವಿವಿರವಾದಂಥ ಚರ್ಚೆಗೆ ತಾವು ಅವಕಾಶವನ್ನು ಕೊಡಬೇಕೆಂದು, ಹೇಳಿ. ಕೇವಲ ಇದು ಪ್ರಿಲಿಮಿನರಿ ಸಬ್‌ಮಿಷನ್. ಅಧ್ಯಕ್ಷರು ಹೇಳುತ್ತಿದ್ದಾರೆ, ಸಮಯಾವಕಾಶ ನಿಮಗೆ ಜಾಸ್ತಿ ಇಲ್ಲ, ಕಡಿಮೆ ಕೊಡುತ್ತಿದ್ದೇವೆ, ಕೇವಲ ಕೆಲವು ವಿಷಯಗಳನ್ನು ಹೇಳಬೇಕು, ನಾವು ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇವೆ. ಪೂರ್ಣ ನಿಮ್ಮ ಹೂರಣವನ್ನು ಇನ್ನೂ ಕೂಡ ಬಿಚ್ಚಲಿಲ್ಲ. ಅದನ್ನು ಬಿಚ್ಚುವುದಕ್ಕೆ ಅವಕಾಶ ಕೊಡಿ ಎಂದು ನಾವು ಮಾನ್ಯ ಅಧ್ಯಕ್ಷರನ್ನು ಕೇಳುತ್ತಿದ್ದೇವೆ. ಈ ರಾಜ್ಯದ ಜನರಿಗೆ ಇದು ಗೊತ್ತಾಗಬೇಕಾಗಿದೆ. ಕಟ್ಟಕಡೆಯ ಮತದಾರರಿಗೆ ಇದು ಗೊತ್ತಾಗಬೇಕಾಗಿದೆ. ನೀವು 160–165 ಜನ ಇದ್ದಂಥವನ್ನು 65 ಜನರಿಗೆ ತಂದಿರುವ ಆ ಮತದಾರರಿಗೆ ಗೊತ್ತಾಗಬೇಕಾಗಿದೆ. ಮತ್ತೊಂದಿಷ್ಟು ಬಯಲಿಗೆ ಬರಬೇಕಾಗಿದೆ. ಇವತ್ತು ಕೇವಲ ಇಷ್ಟಲ್ಲ. ಮುಂದಿನ ದಿವಸಗಳಲ್ಲಿ ನಾವು ಸಾಕಷ್ಟು ತರುತ್ತೇವೆ.

ಶ್ರೀ ಎನ್.ಸಿ. ಭೋಸರಾಜು:– ನಿಮ್ಮ ಹಣೆಬರಹ ಇಡೀ ದೇಶಕ್ಕೇ ಗೊತ್ತಾಗಿದೆ. ಇಡೀ ಭಾರತ ದೇಶದಲ್ಲೇ ನಿಮ್ಮ ಹಣೆಬರಹ ಗೊತ್ತಾಗಿದೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿವರವಾದ ಚರ್ಚೆಯಾಗಲಿ. ನಿಯಮಾವಳಿ ಪ್ರಕಾರ ನೋಟೀಸನ್ನು ಕೊಡಲಿ. ಈಗ ನಾನು ಮಾತನಾಡಿದ್ದೇನು ಮಹಾ ಇದು ಅನ್‌ಪಾರ್ಲಿಮೆಂಟರಿ ಅಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– ನಾನು ಹೇಳಿದ್ದು ಗಂಭೀರವಾದ ಅಪಾದನೆಯನ್ನು ಮಾಡಿದ್ದಾರೆ. ಇದಕ್ಕೆ ಮಾನ್ಯ ಸದಸ್ಯರು ಪುರಾವೆಯನ್ನು ಒದಗಿಸಬೇಕು. ಇಲ್ಲದಿದ್ದರೆ ಗೌರವಯುತವಾಗಿ ಅದನ್ನು ವಾಪಸ್ ತೆಗೆದುಕೊಳ್ಳಬೇಕೆನ್ನುವ ಮಾತನ್ನು ನಾನು ಹೇಳಿದ್ದೇನೆ. ಮತ್ತು ಅದರ ಜೊತೆಗೆ ಈ ಮಾತುಗಳನ್ನು ಕಡತದಿಂದಲೂ ಕೂಡ ವಾಪಸ್ ತೆಗೆಯಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು:– ಈ ರೀತಿಯ ಚರ್ಚೆಯಿಂದ ಏನು ಪ್ರಯೋಜನವಾಗುವುದಿಲ್ಲ. ಈಗ ಅವರು ನಿಮಗೆ ಚುಚ್ಚು ಮಾತನಾಡುವುದು. ನೀವು ಅವರಿಗೆ ಚುಚ್ಚು ಮಾತನಾಡುವುದು, ಅದರಿಂದ ಈ ಸದನದ ಗೌರವವೇನೂ ಹೆಚ್ಚಾಗುವುದಿಲ್ಲ.

3.40 ಪಿಎಂ

ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುವುದು ಇಷ್ಟೇ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಚರ್ಚೆಯನ್ನು ಇವರಿಗೆ ಅಡ್ಡ ದಾರಿ ಹಿಡಿಸಬೇಕಾಗಿದೆ, ಅದಕ್ಕಾಗಿ ಹೀಗೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಚರ್ಚೆ ಆಡಳಿತ ಪಕ್ಷಕ್ಕೆ ಬೇಕಾಗಿಲ್ಲ. ಹಾಗಾಗಿ ಮಧ್ಯಂತರದಲ್ಲಿ ಹೀಗೆ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು:- ಗಾಂಭೀರ್ಯತೆ ಅವರಿಗೇ ಗೊತ್ತಿಲ್ಲ, ನಾವೇನು ಮಾಡುವುದು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಎಲ್ಲಾ ಹಿರಿಯ ಸದಸ್ಯರು ಇದ್ದೀರಿ, ರೂಲ್ ಏನು ಹೇಳುತ್ತದೆಂದು ನಾನು ಹೇಳುತ್ತೇನೆ. ಹಿರಿಯ ಸದಸ್ಯರು ಕೇಳಿ. ನಿಯಮ 191ರಲ್ಲಿ ಹಕ್ಕು ಬಾಧ್ಯತೆ ಪ್ರಶ್ನೆ ಬಗ್ಗೆ ಒಂದು ಸ್ಪಷ್ಟವಾಗಿ ನಾವು ಯಾವ ರೂಲನ್ನು ಫಾಲೋ ಮಾಡಬೇಕು? ಹೇಗೆ ನಿಯಮಾವಳಿಯನ್ನು ಅಳವಡಿಸಬೇಕು ಎಂದು ಇದೆ.

ಶ್ರೀ ಬಸವರಾಜ ರಾಯರೆಡ್ಡಿ:- ಹಕ್ಕುಭಾದ್ಯತೆಯನ್ನು ತಂದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಅಧ್ಯಕ್ಷರ ಅಪ್ಪಣೆ ಪಡೆದು ನಿಂತಿದ್ದೇನೆ.

Sri Basavaraja Raya Reddy:- I am the concerned man. It cannot be a privilege. It doesn't come under privilege. ಇದು ಪ್ರಿವಿಲೇಜ್ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಕ್ಕುಬಾಧ್ಯತೆಯ ಬಗ್ಗೆ ನಿಯಮ 192 ಏನು ಹೇಳುತ್ತದೆ, ತಾವು ಓದಿ ನೋಡಿ. "ಹಕ್ಕುಬಾಧ್ಯತೆ ಪ್ರಶ್ನೆಯ ಸಂಬಂಧದಲ್ಲಿ ಸೂಚನಾ ಪತ್ರ 'ಹಕ್ಕು ಬಾದ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು, ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಸೂಚನಾ ಪತ್ರವನ್ನು ಕೊಡತಕ್ಕದ್ದು, ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ, ಸೂಚನಾ ಪತ್ರದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕುದು."

ಷರತ್ತುಗಳು:- ಅಂದರೆ ಅಧಿವೇಶನ ಪ್ರಾರಂಭ ಆಗುವ ಮುಂಚೆ ಲಿಖಿತ ಮೂಲಕ ನಿಮಗೆ ಕೊಡಬೇಕು, ಆಮೇಲೆ ನೀವು ಅಲೋ ಮಾಡಬೇಕು. ಈಗ ಅ ಮಧ್ಯದಲ್ಲಿ ಆ ರೀತಿ ಅಲೋ ಮಾಡುವುದಕ್ಕೆ ರೂಲ್ 192ರಲ್ಲಿ ನಾವೇ ಮಾಡಿರುವಂತಹದು ಇದೆ. ಅದನ್ನು ತಾವು ನೋಡಿ ರೂಲಿಂಗ್ ಕೊಡಿ. ನಂತರ ಚರ್ಚೆಗೆ ಅವಕಾಶ ಮಾಡಿಕೊಡಿ. ನಮ್ಮದೇನೂ ಅಭ್ಯಂತರ ಇಲ್ಲ. ತಾವು 192 ನಿಯಮ ನೋಡಿ.

ಶ್ರೀ ಬಸವರಾಜರಾಯರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ನಾನು ಹಕ್ಕುಚ್ಯುತಿಯನ್ನು ತಂದಿಲ್ಲ. ಹಕ್ಕುಚ್ಯುತಿ ತರುವುದಕ್ಕೆ ಈ ವಿಚಾರದಲ್ಲಿ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇನ್ನಾವುದು ಬರುತ್ತದೆ? ನೀವು ಅರ್ಥ ಮಾತನಾಡುತ್ತಿದ್ದೀರಿ. ಅದನ್ನೇ ವಿಷಯ ಮಾತನಾಡುತ್ತಿದ್ದೀರಿ.

ಅಧ್ಯಕ್ಷರು:- ಎಲ್ಲಾ ಅಡ್ಡ ದಾರಿಯಲ್ಲಿ ಹೋಗುವುದು ಬೇಡ. ಮಾನ್ಯ ಆರಗ ಜ್ಞಾನೇಂದ್ರ ಅವರು ಆ ಪದ ಏನು ಬಳಕೆ ಮಾಡಿದ್ದಾರೆ, ಅದು ಸರಿಯಲ್ಲ ಎಂದು ತಾವು ಹೇಳಿದ್ದೀರಿ, ಅದನ್ನು ಅವರು ವಾಪಸ್ ತೆಗೆದುಕೊಳ್ಳಲಿ. It is in bad taste.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ದೀರ್ಘವಾಗಿ ಹೇಳಿದರೆ ಅದು ಅನ್‌ಪಾರ್ಲಿಮೆಂಟರಿ ಅಲ್ಲ. ಬೇಕೆಂತಲೇ ಅಡ್ಡ ದಾರಿ ಹಿಡಿಸುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತೀರ್ಮ ಕೊಡುವುದಕ್ಕೆ ಮುಂಚೆ ತಾವು ಕೇಳಬೇಕು. ದಯಮಾಡಿ ಕೇಳಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ರೂಲಿಂಗ್ ಕೊಟ್ಟಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ವಿಚಾರ ಕೇಳಲೇಬೇಕು. ಇದು ಆಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶವರ ಹೆಗಡೆ ಕಾಗೇರಿ:- ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ವಿಷಯ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ಅವರು ಹೇಳಲಿ, ಕೇಳೋಣ.

ಶ್ರೀ ಎನ್.ಎಸ್. ಬೋಸರಾಜು:- ರೂಲಿಂಗ್ ಆಗಿದೆ, ಅದನ್ನು ಪಾಲಿಸಬೇಕು ಅಷ್ಟೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸಂಬಂಧಪಟ್ಟ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಅವರಿಗೆ ಅಧ್ಯಕ್ಷರು ಮಾತನಾಡಲು ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ಪದವನ್ನು ಹಿಂದಕ್ಕೆ ಪಡೆಯುವಂತಹ ಪ್ರಶ್ನೆ ಬರುವುದೇ ಇಲ್ಲ. ತಾವು ಏನು ಬೇಕಾದರೂ ತೀರ್ಮ ಕೊಡಬಹುದು, ಅದು ತಮಗೆ ಸೇರಿದ್ದು. ಅಂತಹ ಗುರುತರವಾದಂತಹ ಆಪಾದನೆ ಏನು ಅಲ್ಲ. ಹಿಂದೆ ಸುಮಾರು 1967ರಲ್ಲಿ ಇರತಕ್ಕಂಥ ಈ ಸದನದಲ್ಲಿ ಏನೆಲ್ಲಾ ಟೀಕೆಗಳು, ಟಿಪ್ಪಣಿಗಳು ನಡೆದಿದೆ, ಪಕ್ಷಗಳ ಮೇಲೆ ದಾಳಿಗಳು ನಡೆದಿದೆ, ಪಕ್ಷಗಳ ಮೇಲೆ ಹೋರಾಟ ನಡೆದಿದೆ. ಆದರೆ ಇಲ್ಲಿ (ಕಾಂಗ್ರೆಸ್‌ನವರು ಎಂದು ಹೇಳಿದ ತಕ್ಷಣ ಇವರು ಹೇಳಿರತಕ್ಕಂಥದ್ದು ಹೊಸ ಕಾಂಗ್ರೆಸ್‌ನವರಿಗೆ ಅಲ್ಲ.) ಶ್ರೀ ರಮೇಶ್‌ಕುಮಾರ್ ಅವರಿಗೆ ಆಗಲೀ ಅಥವಾ ಶ್ರೀ ರಾಯರೆಡ್ಡಿ ಅವರಿಗಾಗಲೀ ಅವರು ಹೇಳಲಿಲ್ಲ. ಅವರು ಹಳೆಯ ಕಾಂಗ್ರೆಸ್‌ನವರ ಬಗ್ಗೆ ಹೇಳಿದ್ದಾರೆಯೇ ಹೊರತು ಹೊಸ ಕಾಂಗ್ರೆಸ್‌ನವರಿಗೆಲ್ಲ ಅದರ ಬಗ್ಗೆ ಯಾರೂ ಚಿಂತೆ ಪಡಬೇಕಾಗಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ (ಕೃಷಿ ಸಚಿವರು):- ಕಾಂಗ್ರೆಸ್ ಸದಸ್ಯರು ಎಂದರೆ ಎಲ್ಲಾ ಒಂದೇ, ಹಳೆಯದು ಯಾವುದು? ಹೊಸದು ಯಾವುದು?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಕ್ಷದ ಸಂವಿಧಾನದಲ್ಲಿ ಹೊಸ ಕಾಂಗ್ರೆಸ್, ಹಳೆಯ ಕಾಂಗ್ರೆಸ್ ಎಂಬುದು ನಮಗೆ ಗೊತ್ತಿಲ್ಲ. ಇವರು ಕಾಂಗ್ರೆಸ್‌ಗೇ ಹೊಸ ಸಂವಿಧಾನ ಬರೆಯುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅವರು ಹೇಳಿರುವುದನ್ನು ಮತ್ತೆ ನಾನು ಸಮರ್ಥಿಸುತ್ತೇನೆ. ಅವರು ಹಳೆಯ ಕಾಂಗ್ರೆಸ್‌ನವರ ಬಗ್ಗೆ ಮಾತ್ರ ಹೇಳಿದ್ದಾರೆಯೇ ಹೊರತು ಹೊಸ ಕಾಂಗ್ರೆಸ್‌ನವರಿಗೆ ಅಲ್ಲ. ಮಾನ್ಯ ರಮೇಶ್ ಕುಮಾರ್ ಅವರಿಗೆ ಆಗಲೀ, ಶ್ರೀ ರಾಯರೆಡ್ಡಿ ಅವರಿಗಾಗಲೀ, ಶ್ರೀ ಎಸ್.ಎಸ್. ಪಾಟೀಲ್ ಅವರಾಗಲೀ ನೀವುಗಳು ದುಡ್ಡು ತೆಗೆದುಕೊಂಡಿದ್ದೀರಿ ಎಂದು ಹೇಳೇ ಇಲ್ಲ. ಅವರು ನೇರವಾಗಿ ಹೇಳಿಲ್ಲ. ಮಾನ್ಯ ಶಿವಕುಮಾರ್ ಅವರೇ, ನಿಮ್ಮಗಳ ಬಗ್ಗೆ ಹೇಳುತ್ತಾರೆಯೇ ಹೊರತು ಹೊಸಬರ ಮೇಲೆ ಅಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಕ್ಷದ ಸಂವಿಧಾನದಲ್ಲಿ ಹಳೆಯ ಕಾಂಗ್ರೆಸ್ ಸದಸ್ಯರು, ಹೊಸ ಕಾಂಗ್ರೆಸ್ ಸದಸ್ಯರು ಎಂದು ಇಲ್ಲ. ದಯಮಾಡಿ ಹೊಸ ಪದಗಳನ್ನು, ಹೊಸ ಪಕ್ಷದ ನಿಮ್ಮ ಸಂವಿಧಾನವನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. We are all congress man.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಶ್ರೀ ವಾಟಾಳ್ ನಾಗರಾಜ್ ಅವರು ನಮ್ಮ ಪಕ್ಷದಲ್ಲಿ ಭಿನ್ನಮತ ಹುಟ್ಟು ಹಾಕಿ ಹೊಸ ಕಾಂಗ್ರೆಸಿಗರು, ಹಳೆಯ ಕಾಂಗ್ರೆಸಿಗರು, ಉದ್ದಕ್ಕೆ ಇರುವ ಕಾಂಗ್ರೆಸಿಗರು, ಮೋಟಗಿರುವ ಕಾಂಗ್ರೆಸಿಗರು, ಇದೆಲ್ಲಾ ಮಾಡಬಾರದು. ಇದು ಇವರ ಘನತೆಗೆ ತಕ್ಕುದು ಅಲ್ಲ. ಈ ದೇಶದಲ್ಲಿ ಇರುವುದು ಭಾರತ ರಾಷ್ಟ್ರೀಯ ಕಾಂಗ್ರೆಸ್. ನಾವೆಲ್ಲಾ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್:- ನೀವು ಈ ರೀತಿ ಸಮರ್ಥನೆ ಮಾಡುವುದು ಸರಿಯಲ್ಲ. ಒಳ್ಳೆಯ ಸೂಚನೆ ಅಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಿರಿ. ಇದು ಸರಿಯಿಲ್ಲ, ಅವರು ವಾಪಸ್ ತೆಗೆದುಕೊಳ್ಳಬೇಕು. ತಾವು ರೂಲಿಂಗ್ ಕೊಟ್ಟಿರಿ. ಮಾನ್ಯ ಯಡಿಯೂರಪ್ಪನವರೂ ಸಹ ಮಾನ್ಯ ಜ್ಞಾನೇಂದ್ರರವರು ಮಾತನಾಡಿದ್ದು ಸರಿಯಿಲ್ಲ ಎಂದು ಹೇಳಿದ್ದಾರೆ. ನಾನು ಅದನ್ನು ಓದುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಬಿ.ಎಸ್. ಯಡಿಯೂರಪ್ಪ ಹೇಳಿದ್ದನ್ನು ಪೂರ್ತಿ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:- ಬಿ.ಎಸ್. ಯಡಿಯೂರಪ್ಪನವರೇ ಹೇಳಿದ್ದಾರೆ, ಅದು ಈ ರೀತಿ ಇವೆ ಮಾನ್ಯ ಜ್ಞಾನೇಂದ್ರ ಅವರು ಹೇಳಿದ್ದು ಸರಿಯಿಲ್ಲ. ಏಕೆಂದರೆ ಇಲ್ಲಿ ಕಾಂಗ್ರೆಸ್ ಅಧ್ಯಕ್ಷರು ಇಲ್ಲ, ಮಾಜಿ ಮುಖ್ಯಮಂತ್ರಿಗಳೂ ಇಲ್ಲ. ಲೆಕ್ಕವೆಲ್ಲಾ ಅವರ ಹತ್ತಿರ ಇದೆ, ಇವರನ್ನು ಲೆಕ್ಕ ಕೇಳಿದರೆ ಇವರು ಹೇಗೆ ಹೇಳುತ್ತಾರೆ ಎಂದು ಅವರು ಹೇಳಿದ್ದಾರೆ. ಯಾರು ಎಂದರೆ ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿಗಳು ಇರಬೇಕಾಗಿತ್ತೋ ಇಲ್ಲವೋ ನಾವು ಇಲ್ಲಿ 65 ಜನ ಇದ್ದೇವೆ, ನಮ್ಮ ವಿಚಾರ ಅಲ್ಲ ಇದು. ಈ ಕಾಂಗ್ರೆಸ್ ಪಕ್ಷಕ್ಕೆ ಕೋಟ್ಯಾಂತರ ಜನ ಮೆಂಬರ್ಸ್ ಇದ್ದಾರೆ. ಗ್ರಾಮ ಪಂಚಾಯತಿ ಮೆಂಬರ್ಸ್ ಇದ್ದಾರೆ, ಜಿಲ್ಲಾ ಪಂಚಾಯತಿಯವರು ಇದ್ದಾರೆ, ಮುನಿಸಿಪಾಲಿಟಿಯವರು ಇದ್ದಾರೆ, ಎಂಎಲ್‌ಎಗಳು ಇದ್ದಾರೆ, ಎಂಪಿಗಳು ಇದ್ದಾರೆ. ಹೀಗೆ ಒಂದು ದೊಡ್ಡ ಪರ್ವತವಾದಂತಹ ಪಕ್ಷದ ಸ್ವಾಭಿಮಾನದ ಪ್ರಶ್ನೆ. ಇದು ವೈಯಕ್ತಿಕವಾಗಿ ಡಿ.ಕೆ. ಶಿವಕುಮಾರ್, ಇನ್ನೊಂದು ಪಕ್ಷದಿಂದ ಪ್ರತಿನಿಧಿಸಿದ್ದಂತಹ ಜನ, ಇದು ಮಾತನಾಡಿದ್ದು ಸರಿಯಿಲ್ಲ. ನೀವು ವಾಪಸ್ ತೆಗೆದುಕೊಳ್ಳಬೇಕೆಂದು ತಾವು ರೂಲಿಂಗ್ ಕೊಟ್ಟಿದ್ದೀರಿ. ತಾವು ಕೊಟ್ಟ

ರೂಲಿಂಗ್‌ಗೆ ಅವರು ಬದ್ಧರಾಗಬೇಕು. ಇಲ್ಲ ಎಂದರೆ ತಾವೇ ಇದನ್ನು ಕಡತದಿಂದ ತೆಗೆದು ಹಾಕಲಿಕ್ಕೆ ತಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ ಈ ಒಂದು ಪರಂಪರೆಯನ್ನು ನಾವು ಬೆಳೆಸಿಕೊಂಡು ಹೋಗುವುದು ಬೇಡ. ಈ ಮನೆಗೆ ಹೊಸದಾಗಿ ಅನೇಕ ಜನ ಸದಸ್ಯರು ಬಂದಿದ್ದಾರೆ. ಈ ಮಾತಿಗೆ ಕೊನೆ ಇರುವುದಿಲ್ಲ. ನಾಳೆ ತಾವೂ ಕೂಡ ಬಹಳ ದೊಡ್ಡ ಜವಾಬ್ದಾರಿಯಾಗಿ ಇಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ನಾವು ತಪ್ಪು ಮಾಡಿದರೂ ಸಹ ತಾವು ತಿದ್ದಿ ಹೇಳಬೇಕಾಗುತ್ತದೆ. ನಾವು ತಪ್ಪು ಮಾಡಿದರೂ ಸಹ ತಾವು ತಪ್ಪು ಎಂದು ಹೇಳಬೇಕಾಗುತ್ತದೆ. ಆದ್ದರಿಂದ ತಾವೇನು ಈ ತೀರ್ಪನ್ನು ಕೊಟ್ಟಿದ್ದೀರಿ, ನಾವು ಇದಕ್ಕೆ ಸ್ವಾಗತವನ್ನು ಮಾಡುತ್ತೇವೆ ಮತ್ತು ತಮಗೆ ಏನು ಆದೇಶ ಇದೆ? ಆದೇಶವನ್ನು ಅವರು ಮನ್ನಣೆ ಮಾಡಬೇಕು. ಮನ್ನಣೆ ಮಾಡಲಿಲ್ಲ ಎಂದರೆ ತಾವು ಇದನ್ನು ಕಡತದಿಂದ ತೆಗೆದು ಹಾಕುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಮಿಕ್ಕಿದ್ದ ವಿಚಾರ, ನಾವು ಬೇರೆ ರೀತಿಯಲ್ಲಿ ವಿಚಾರ ಮಾಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಾಖಲೆಗಳಿಗೆ ತಪ್ಪು ಮಾಹಿತಿ ಹೋಗುವುದು ಬೇಡ.

ಶ್ರೀ ಡಿ.ಕೆ. ಶಿವಕುಮಾರ್:– ಬೇರೆಯವರು ಏನು ತೆಗೆಯಬೇಕೋ ತೆಗೆದುಕೊಳ್ಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಭಾಧ್ಯಕ್ಷರು ಯಾವುದೇ ರೂಲಿಂಗ್ ಕೊಟ್ಟಿಲ್ಲ. ಅದರಿಂದ ದಯಮಾಡಿ ಮಾನ್ಯ ಶಿವಕುಮಾರ್ ಅವರು ಅಧ್ಯಕ್ಷರು ಹೇಳಿದ ಮಾತನ್ನು ಹೇಳಿಸಿ ದಾಖಲೆಗೆ ಹೋಗುವಂತಹ ಪ್ರಯತ್ನ ಮಾಡುವುದು ಬೇಡ. ತಾವು ಬೇಕಾದರೆ ದಾಖಲೆ ತೆಗೆದು ನೋಡಿ. ಸಭಾಧ್ಯಕ್ಷರಿಗೆ ನಾನು ವಿನಂತಿ ಮಾಡುತ್ತೇನೆ. ಬರುವಂತಹ ದಿವಸಗಳಲ್ಲಿ ಇನ್ನೂ ಕಠಿಣವಾದ ಶಬ್ದಗಳಲ್ಲಿ ಹಿಂದೆ ಆಡಳಿತ ಮಾಡಿದಂತಹ ಕಾಂಗ್ರೆಸ್ ಪಕ್ಷವನ್ನು ಟೀಕೆ ಮಾಡಬೇಕಾಗುತ್ತದೆ. ಪ್ರತಿನಿತ್ಯ ನೀವು ಇದೇ ವಿಷಯವನ್ನು ಚರ್ಚೆ ಮಾಡುವಂತಹ ಸಂದರ್ಭ ಬರುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:– ಟೀಕೆ ಮಾಡಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಆರಗ ಜ್ಞಾನೇಂದ್ರ ಅವರು ಬಹಳ ಜವಾಬ್ದಾರಿಯಿಂದ ಮಾತನಾಡಿದ್ದಾರೆ. ಇದನ್ನು ಬೆಳಸದೇ ತುಂಬಾ ಪ್ರಮುಖವಾದ ವಿಷಯ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅಧ್ಯಕ್ಷರ ರೂಲಿಂಗನ್ನು ರಿಸರ್ವ್ ಇಡಲಿ. ಯಾವುದನ್ನು ಹೇಳಬೇಕು ಎನ್ನುವುದನ್ನು ಯಾವ ಟೇಸ್ಟ್‌ನಲ್ಲಿ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಅದನ್ನು ಅಪಾರ್ಥ ಮಾಡಿಕೊಳ್ಳದೇ ನಿಮ್ಮ ಮೇಲೆ ನೀವೇ ಎಳೆದುಕೊಳ್ಳುತ್ತಿದೀರಿ. ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ತಾವು ಒಪ್ಪಿಕೊಂಡಿದ್ದೀರಿ ಅವರು ಮಾತನಾಡಿರುವುದು. ಅದು ತಪ್ಪು ಎಂದು; ಅದು ತೀರ್ಮಾನ ಆಗಲಿ. ಮೈಮೇಲೆ ಎಳೆದುಕೊಳ್ಳುವುದು ಅದು ಬೇರೆ ವಿಚಾರ.

ಅಧ್ಯಕ್ಷರು:– ಇಲ್ಲಿಗೆ ಈ ವಿಚಾರ ಸಾಕು ಮಾಡೋಣ. ಏನು ಮಾನ್ಯ ಆರಗ ಜ್ಞಾನೇಂದ್ರ ಅವರು ಸ್ವೀಪಿಂಗ್ ರಿಮಾರ್ಕ್ಸ್ ಮಾಡಿದ್ದಾರೆ, ನಾನು ಈಗಲೂ ವಿನಂತಿ ಮಾಡುತ್ತಿದ್ದೇನೆ. ಅದನ್ನು ಅವರು ವಾಪಸ್ ಪಡೆಯಲಿ. ಅದು ಪಾರ್ಲಿಮೆಂಟರಿಯೋ, ಅನ್‌ಪಾರ್ಲಿಮೆಂಟರಿಯೋ ಆ ಪ್ರಶ್ನೆ ಬೇರೆ. ಆದರೆ ಈ ರೀತಿ ಪದಗಳನ್ನು ಬಳಸುತ್ತಾ ಹೋದರೆ ಈ ಸದನದ ಗೌರವ ಹೆಚ್ಚು ಆಗುವುದಿಲ್ಲ. ಅಷ್ಟನ್ನು ಹೇಳಿ ನಾನು ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಈಗ ಅವರು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಅಧ್ಯಕ್ಷರೆ, ತಾವು ತೆಗೆದುಹಾಕಬೇಕು.

ಶ್ರೀ ವಾಟಾಳ್ ನಾಗರಾಜ್:– ನಾವು ತಮ್ಮ ತೀರ್ಪನ್ನು ಪ್ರಶ್ನಿಸುತ್ತಿಲ್ಲ. ಮತ್ತೊಮ್ಮೆ ತಮಗೆ ಮನವಿ ಮಾಡಿಕೊಳ್ಳುತ್ತಿರುವುದೇನೆಂದರೆ, ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಈ ಸದನಕ್ಕೆ ದೊಡ್ಡ, ಅಗಾಧವಾದ ... ಏನೆಂದು ನನಗರ್ಥವಾಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ವಾಟಾಳ್ ನಾಗರಾಜ್‌ರವರೆ, ವಾಟಾಳ್ ನಾಗರಾಜ್‌ರವರು ಚಾಮರಾಜನಗರಕ್ಕೆ 20 ಕೋಟಿ ರೂಪಾಯಿಗಳ ಲಂಚ ತೆಗೆದುಕೊಂಡಿದ್ದಾರೆಂದು ನಾವು ಹೇಳಬಹುದೇ?

ಶ್ರೀ ವಾಟಾಳ್ ನಾಗರಾಜ್:– ನೇರವಾಗಿ ಹೆಸರು ಹೇಳಿದ್ದರೆ ಅದಕ್ಕೇನಾದರೂ ಹೇಳೋಣ.

ಶ್ರೀ ಡಿ.ಕೆ. ಶಿವಕುಮಾರ್:– ಇದು ಕಾಂಗ್ರೆಸ್ ಸ್ವಾಮಿ. ನಾವಿರುವುದು ಕಾಂಗ್ರೆಸ್‌ನಲ್ಲಿ....

ಶ್ರೀ ವಾಟಾಳ್ ನಾಗರಾಜ್:– ಈಗ ಎರಡೂ ಪಕ್ಷಗಳೂ ಸೇರಿಕೊಂಡು ಏನು ಸರ್ಕಾರ ರಚಿಸಿವೆ, ಒಂದು ಪಕ್ಷದವರು ಇವರ ಮೇಲೆ ಹರಾಜು ಹಾಕಿದ್ದಾರೆ.

ಅಧ್ಯಕ್ಷರು:– ನಾನು ಮಾನ್ಯ ಸದಸ್ಯರಿಗೆ ಮನವಿ ಮಾಡಿದ್ದೇನೆ. ಈಗ ನಿಲುವಳಿ ಸೂಚನೆ ಮೇಲೆ ಚರ್ಚೆ ಜರುಗುತ್ತಿರುವುದರಿಂದ ಚರ್ಚೆ ಮುಂದುವರಿಸೋಣ. ನಾನು ಎಲ್ಲಾ ಪಕ್ಷಗಳ ಮಾನ್ಯ ಸದಸ್ಯರುಗಳಿಗೆ ಹೇಳುವುದೇನೆಂದರೆ, ದಯಮಾಡಿ ಚುಚ್ಚಿ ಮಾತನಾಡತಕ್ಕಂಥ, ಏನೋ ಒಂದು ಗೊಂದಲವಾಗಿದೆಯೆಂದು.....

ಶ್ರೀ ಬಿ.ಎಸ್. ಯಡಿಯೂರಪ್ಪ:– ಚುಚ್ಚಿ ಮಾತನಾಡುವುದು ಪಾರ್ಲಿಮೆಂಟರಿ ಸಿಸ್ಟಮ್‌ನಲ್ಲಿ ಅನಿವಾರ್ಯ. ಇಲ್ಲದಿದ್ದರೆ, ದಪ್ಪ ಚರ್ಮದ ಕಾಂಗ್ರೆಸ್ಸಿನ ಸ್ನೇಹಿತರಿಗೆ ಅರ್ಥವಾಗುವುದಾದರೂ ಹೇಗೆ? ಇನ್ನೂ ಕಠಿಣ ಶಬ್ಧಗಳನ್ನು ಉಪಯೋಗಿಸಬೇಕಾಗುತ್ತದೆ.

ಅಧ್ಯಕ್ಷರು:– ಹಾಗೆ ಮಾತನಾಡಬಾರದು. ಹಾಗೆ ಮಾತನಾಡುವುದರಿಂದ ಈ ಸದನದ ಗೌರವ ಹೆಚ್ಚಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾವು ಚುಚ್ಚಿ ಚುಚ್ಚಿ ಮಾತನಾಡದಿದ್ದರೆ ಬೇರೆ ಇನ್ನೇನು ಮಾತನಾಡಬೇಕೆಂದು ನನಗರ್ಥವಾಗುವುದಿಲ್ಲ. ನಾವು ಇವರಿಗೆ ಮಂಗಳಾರತಿ ಎತ್ತೋಣವೇ? ಕೈ ಮುಗಿಯೋಣವೇ? ಏನೆಂದು ನನಗರ್ಥವಾಗುವುದಿಲ್ಲ. ಸರ್ಕಾರಕ್ಕೆ ಯಾವ ರೀತಿ ಹೇಳಬೇಕು. ಅಧ್ಯಕ್ಷರೆ, ತಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ. ಇನ್ಯಾವ ರೀತಿ ಹೇಳಬೇಕು? ಟೀಕೆಗಳನ್ನು ಮಾಡುವಂತಿಲ್ಲ, ಚುಚ್ಚುವ ಹಾಗಿಲ್ಲ, ಮಂಗಳಾರತಿ ಎತ್ತುವ ಹಾಗಿಲ್ಲ, ಹೇಳುವಂತಿಲ್ಲ ಹಾಗಾದರೆ, ಇನ್ನೇನು ಮಾತನಾಡಬೇಕು?

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ತಾವು ಹೇಳಬೇಕು. ಇತರರನ್ನು ಟೀಕೆ ಮಾಡಬಾರದೆಂದರೆ, ಒಂದು ಪಕ್ಷದವರು ಲಂಚ ತೆಗೆದುಕೊಂಡರೆ ಅದಕ್ಕೆ ಏನೆಂದರೆ ಹೇಳಬೇಕು ಮತ್ತು ಹೇಗೆ ಹೇಳಬೇಕೆಂದು ತಾವು ರೂಲಿಂಗ್ ಕೊಟ್ಟರೆ ಒಳ್ಳೆಯದು.

ಶ್ರೀ ಡಿ.ಕೆ. ಶಿವಕುಮಾರ್:– ರೂಲಿಂಗ್ ಕೊಟ್ಟಾಗಿದೆ. ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ರೂಲಿಂಗ್ ಕೊಟ್ಟಾಗಿದೆ. ಅದನ್ನು ಅವರು honour ಮಾಡಬೇಕು.

ಅಧ್ಯಕ್ಷರು:– ಮಾನ್ಯ ಮಾಧುಸ್ವಾಮಿಯವರೆ, ನಿಲುವಳಿ ಸೂಚನೆ ಮೇಲೆ ತಾವು ಚರ್ಚೆ ಆರಂಭಿಸಬೇಕು.

ಶ್ರೀ ಎಸ್. ರಾಜೇಂದ್ರನ್:– ಈಗ ನಾಳೆ ದಿವಸ ನಾವು ಇದರ ಬಗ್ಗೆ ಮಾತನಾಡಬೇಕೆಂದರೆ what is the other world that should be used? ಒಂದು ಪಕ್ಷದವರು ಲಂಚ ತೆಗೆದುಕೊಂಡು ಕೆಲಸ ಮಾಡುತ್ತಾರೆಂದರೆ ಅದರ ಬಗ್ಗೆ ಏನೆಂದು ಹೇಳುವುದು? ಆ ಪಕ್ಷವೆಂದು ಹೇಳುವ ಹಾಗಿಲ್ಲದಿದ್ದರೆ ಇನ್ನೇನು ಹೇಳಬೇಕು? In what way we have to quote? ಇದರ ಬಗ್ಗೆ ಸ್ಪಷ್ಟೀಕರಣ ನೀಡಿದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ:– ಈ ವಿಚಾರದಲ್ಲಿ ರೂಲಿಂಗ್ ಇದೆ. ದಯವಿಟ್ಟು ಮತ್ತೊಂದು ಸಲ ಗಮನಕ್ಕೆ ತರುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಬಸವರಾಜ ರಾಯರೆಡ್ಡಿಯವರೆ, ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದರೆ ಮೊದಲು ಅದರ ಬಗ್ಗೆ ತೀರ್ಮಾನವಾಗಲಿ. ತಾವು (ಆರಗ ಜ್ಞಾನೇಂದ್ರ) ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅಧ್ಯಕ್ಷರು ಹೇಳಿದ್ದಾರೆ. ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಲು ತಾವು (ಅಧ್ಯಕ್ಷರು) ಆದೇಶ ಕೊಟ್ಟಿದ್ದೀರಿ. ಅವರು ಮೊದಲು ಅದನ್ನು ಮಾಡಬೇಕು. ಅದು ಆಗದಿದ್ದರೆ ತಾವು (ಅಧ್ಯಕ್ಷರು) ಕ್ರಮ ಕೈಗೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಚರ್ಚೆ ಮುಂದುವರೆಸಬೇಕೆಂಬ ವಿಷಯದಲ್ಲಿ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಹಿರಿಯರಾದ ಮಾನ್ಯ ಶಿವಕುಮಾರ್‌ರವರು ಈ ರೀತಿ ಅಡ್ಡಿಪಡಿಸಬಾರದು.

ಶ್ರೀ ಕೆ.ಎಸ್. ಈಶ್ವರಪ್ಪ:– ಅದನ್ನು ಮರು ಪರಿಶೀಲನೆ ಮಾಡುವುದಕ್ಕೆ ನಾವು ಮಾನ್ಯ ಅಧ್ಯಕ್ಷರಿಗೆ ಮನವಿ ಮಾಡಿದ್ದೇವೆ. ಅವರು ತೀರ್ಮಾನ ಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೆ, ಅಕ್ಕಿ ಈ ರಾಜ್ಯದಿಂದ ಹೊರಗಡೆ ಏನು ಹೋಗುತ್ತಿತ್ತು, ಅದರ ಬಗ್ಗೆ ನಿಯಮ 60ರಡಿ ಚರ್ಚೆ ಮಾಡಲು ತಾವು ಅವಕಾಶ ಕಲ್ಪಿಸಿರುವುದಕ್ಕೆ ತಮಗೆ ಅಭಿನಂದಿಸುತ್ತಾ, ತಂದಿರುವ ನಿಲುವಳಿ ಸೂಚನೆಯ ಮಹತ್ವವೇನೆಂದು ಮಾತನಾಡಲು.... ಶಿವಕುಮಾರ್‌ರವರೆ, ಅವರು ನನಗೆ ಮಾತನಾಡಬೇಕೆಂದು ಹೇಳಿದ್ದಾರೆ, ನಾನು ಮಾತನಾಡುತ್ತಿದ್ದೇನೆ. Yes, he has called me. ನಾವೇನು ಮಾಡುವುದು?

ಶ್ರೀ ಡಿ.ಕೆ. ಶಿವಕುಮಾರ್:– ಅಧ್ಯಕ್ಷರೆ, ನಮಗೆ ಅರ್ಥವಾಗಲಿಲ್ಲ. ತಾವು ರೂಲಿಂಗ್ ಕೊಟ್ಟಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ನೀವೇ ಸಜೆಸ್ಟ್ ಮಾಡಿದ್ದೀರಲ್ಲಾ. When you have suggested, the second option is open ಅಲ್ಲವೇ?

ಅಧ್ಯಕ್ಷರು:– ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು, ಬಳಸಿರುವ ಪದ bad taste ಆಗಿರುವುದರಿಂದ ವಾಪಸ್ಸು ಪಡೆಯಬೇಕೆಂದು ಹೇಳಿದ್ದೇನೆ. ಆದರೆ, ಅದಕ್ಕೆ ಅವರು ಮನ್ನಣೆ ನೀಡುತ್ತಿಲ್ಲ. ಈಗ ಅದು ಅಲ್ಲ. ಆ ಕಾರಣದಿಂದ ಸದನದ ಮುಂದೆ ಹಕ್ಕುಚ್ಯುತಿ ತರುತ್ತೀರೋ ಅಥವಾ ಏನೆಂದು ವಿಮರ್ಶೆ ಮಾಡಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಅದನ್ನು ಕಡತದಿಂದ ತೆಗೆದುಹಾಕಬೇಕು. ನಮ್ಮ ರಿಕ್ವೆಸ್ಟ್ ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ನಂತರವೂ ಮತ್ತೆ ಚರ್ಚೆಯಾಗುತ್ತಿರುವುದು ಖಂಡಿತಾ ಅರ್ಥವಾಗುವುದಿಲ್ಲ. ಮತ್ತೆ ಅದರ ಮೇಲೆ ಚರ್ಚೆ ಹೋಗುವುದಲ್ಲ. ಹಕ್ಕುಚ್ಯುತಿ ತರಬೇಕೆಂದಿದ್ದರೆ ನಾಳೆ ತೆಗೆದುಕೊಂಡು ಬನ್ನಿ. ಮತ್ತೇಕೆ ಚರ್ಚೆ ಮಾಡುತ್ತೀರಿ? ಅಧ್ಯಕ್ಷರು ರೂಲಿಂಗ್ ಕೊಟ್ಟ ನಂತರ ಅದನ್ನು ನೀವು (ಡಿ.ಕೆ. ಶಿವಕುಮಾರ್) ಪ್ರಶ್ನಿಸುತ್ತೀರಾ? ನಾಳೆ ಬೆಳಿಗ್ಗೆ ಬೇಕಾದರೆ ನೋಟೀಸ್ ಕೊಡಿ. ಆಗಲೇ ರೂಲಿಂಗ್ ಕೊಟ್ಟಾಯಿತು. ಈಗೇಕೆ ಅದರ ಬಗ್ಗೆ ಚರ್ಚಿಸುತ್ತೀರಿ?

(ಗೊಂದಲ)

ನಿಲುವಳಿ ಸೂಚನೆ

ವಿಷಯ:- ಕೂಲಿಗಾಗಿ ಕಾಳು ಯೋಜನೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ

+ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಬಡವರಿಗೆ ವಿತರಣೆಯಾಗಬೇಕಾದ ಅಕ್ಕಿ ಅದರಲ್ಲೂ ಬರಗಾಲದಲ್ಲಿ ಜನರು ನರಳುತ್ತಿದ್ದ ಕಾಲದಲ್ಲಿ ಬಡವರಿಗೆ ಕೂಲಿಗೋಸ್ಕರ ಕಾಳು ಯೋಜನೆಯಡಿ ಕೊಡಬೇಕಾಗಿದ್ದ ಅಕ್ಕಿ ವಿತರಣೆಯಾಗಲಿಲ್ಲ. ಅದು ಬೇರೆಲ್ಲೋ ಹೋಗಿದೆ, ಮಾರಾಟವಾಗಿದೆಯೆಂದು ನಾವು ಇವೊತ್ತು ಮೋಷನ್ ಅನ್ನು ತಮ್ಮ ಮುಂದೆ ಮೂವ್ ಮಾಡಿದ್ದೇವೆ. ಅದರ ಪ್ರಾಮುಖ್ಯತೆ ಇಷ್ಟೇ ಒಂದು, ನಮ್ಮ ರಾಜ್ಯ ಸರ್ಕಾರದವರು utilisation certificate ಅನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ನಾವು 11 ಲಕ್ಷ ಚಿಲ್ಲರೆ ಟನ್‌ಗಳಷ್ಟು ಅಕ್ಕಿ ಬಳಸಿ ಜನರಿಗೆ ಏನು ಹಂಚಿದ್ದೇವೆ, ನಾವು ಪದೇ ಪದೇ ಸರ್ಕಾರಕ್ಕೆ ಕೇಂದ್ರ ಸರ್ಕಾರಕ್ಕೆ ಹೇಳುತ್ತಾ ಬಂದಿದ್ದೇವೆ. ನಮಗೆ ಕೊಡುತ್ತಿರುವ ಅಕ್ಕಿ ಸಾಕಾಗಲಿಲ್ಲ, ನಾವು ಇನ್ನೊಂದಿಷ್ಟು ಕಾಮಗಾರಿಗಳನ್ನು ಮಾಡಿಸಬಹುದಿತ್ತು. ಇದರಿಂದಾಗಿ ಈ ಬರಗಾಲದ ಪರಿಸ್ಥಿತಿಯನ್ನು ನಾವು ಸರಿಯಾಗಿ ನಿಭಾಯಿಸುವುದಕ್ಕಾಗಲಿಲ್ಲ. ಮೂರನೆಯದಾಗಿ, ಸರ್ಕಾರಿ ಲೆಕ್ಕದಲ್ಲಿ ನಾವು ಏನು ಕಾಮಗಾರಿಗಳನ್ನು ಮಾಡಿಸಿದ್ದೇವೆ, ಆದೆಲ್ಲವೂ ಪಾರದರ್ಶಕವಾಗಿ ನಡೆಯುತ್ತಿಲ್ಲವೆಂದು ಆತ್ಮಶೋಧನೆ ಮಾಡಿಕೊಳ್ಳುವ ಕಾಲಕ್ಕೆ ಬಂದು ನಿಂತಿದ್ದೇವೆ. ಕೂಲಿ ಯಾರು ಮಾಡಿದ್ದಾರೆ? ಅದು ಮೆಷಿನ್‌ನಲ್ಲಾಯಿತೇ? ನಾವು ಯಾರ್‍ಯಾರದೋ ಹೆಸರುಗಳನ್ನು ಬರೆದುಕೊಂಡು ಹಣ ಪಡೆದು ಕೂಲಿ ಮಾಡಿದ್ದಾರೆ, ಕಾಳು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಅಥವಾ ಪ್ರಾಕ್ಟಿಕಲ್ ಆಗಿ ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದಾಗ ರಾಜ್ಯ ಸರ್ಕಾರ ಏನು ಮಾಡಬೇಕಾಗಿತ್ತು? ಅಕ್ಕಪಕ್ಕದ ರಾಜ್ಯ ಸರ್ಕಾರಗಳು ಏನು ಮಾಡಿದವು? ನಾವು ಎಲ್ಲಾ ಕೆಲಸಗಳನ್ನೂ ಮ್ಯಾನ್ಯುಯಲ್ ಆಗಿ ಮಾಡುತ್ತಿದ್ದೇವೆಂದು ಹೇಳುವಂತಹ ಮೂರ್ಖತನದ ವಾದವನ್ನು ನಾನು ಈಗ ಮಾಡುವುದಿಲ್ಲ. ಆದರೆ, ಸರ್ಕಾರ ಇವೊತ್ತು ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಇಂತಹ practical difficulty ಇರುವುದರಿಂದ ನಾವು ಈ ರೀತಿ ಮಾಡುತ್ತೇವೆಂದು ಹೇಳಿ ಇವೊತ್ತು ಅಧಿಕಾರಿಗಳನ್ನು ಗೊಂದಲಕ್ಕೆ ಸಿಲುಕಿಸದಂತೆ ಮಾಡಬೇಕಾಗಿತ್ತು. ಇವೊತ್ತು ಜರೂರು ಏನಿದೆಯೆಂದರೆ, ಒಂದು ಕಡೆ ಪಡಿತರ ವಿತರಣೆ ಪದ್ಧತಿಯಲ್ಲಿ ಕೊಟ್ಟಿದ್ದ ಹಳದಿ ಕಾರ್ಡನ್ನು ಕಡಿತಗೊಳಿಸಿದ್ದೀರಿ. ಚುನಾವಣೆ ಸಮಯದಲ್ಲಿ ನಾವು ಅವರಿಗೆ

ಒಂದು ಚೀಟಿ ಕೊಟ್ಟು ಸೊಸೈಟಿಗೆ ಹೋಗಿ ಅಕ್ಕಿ ತೆಗೆದುಕೊಳ್ಳಿರೆಂದು ಹೇಳಿದವರು ಇವೊತ್ತು ಅದನ್ನು ನಿಲ್ಲಿಸಿದ್ದೇವೆ. ಇನ್ನೊಂದೆಡೆ ಕೂಲಿಗಾಗಿ ಬಂದಂಥ ಕಾಳನ್ನು ಅವರು ಕೈಗೆಟ್ಟಕುವುದಕ್ಕೂ ನಾವು ಬಿಡಲಿಲ್ಲ! ಎಲ್ಲಿಯೋ ಯಾವುದೋ ರೈಸ್ ಮಿಲ್‌ಗೆ ತೆಗೆದುಕೊಂಡು ಹೋದೆವು, ಎಲ್ಲಿಯೋ ಪಾಲಿಷ್ ಮಾಡಿ ಯಾರಿಗೋ ಕೊಟ್ಟಿದ್ದೇವೆ. ಈ ಎಲ್ಲದರ ಮಧ್ಯೆ ನರಳಿದವರ್ಯಾರು? ಈ ರಾಜ್ಯದ ಬಡವ, ಕೂಲಿ ಕಾರ್ಮಿಕ. ಯಾರ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ನಾವು ಕೇಂದ್ರದಿಂದ ತಂದೆವೋ, ಯಾರ ಹೆಸರಿನಲ್ಲಿ ಹಣ ಖರ್ಚು ಮಾಡಿದೆವೋ, ಯಾರ ಹೆಸರಿನಲ್ಲಿ ಸಣ್ಣ ನೀರಾವರಿ ಕೆಲಸ ಮಾಡಿಸುತ್ತೇವೆಂದು ಹಣ ತಂದೆವೋ, ಯಾರ ಹೆಸರಿನಲ್ಲಿ ವರ್ಲ್ಡ್ ಬ್ಯಾಂಕ್ ಲೋನ್ ತಂದೆವೋ, ಇದೆಲ್ಲದರದ್ದೂ ದುರ್ವ್ಯವಹಾರವಾಗಿದೆ. ಇದನ್ನು ಯಾರು ಮಾಡಿದ್ದಾರೆ, ಏಕೆ ಮಾಡಿದ್ದಾರೆಂದು ಪ್ರಸ್ತಾಪಿಸುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ನಾನು ಅನಂತರ ಮಾತನಾಡುತ್ತೇನೆ. ಈಗ ಇದಕ್ಕೆ ಏನಾದರೊಂದು ಪರಿಹಾರ ಸಿಗಬೇಕಲ್ಲಾ ಇದರೊಂದಿಗೆ ಮತ್ತೊಂದು ರೈಸ್ ಅಲಾಟ್‌ಮೆಂಟ್ ಆಗಿದೆ. ಇವೊತ್ತು ಏನಾಗಿದೆಯೆಂದರೆ, ಯಾವುದೇ ಅಧಿಕಾರಿ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಏಕೆಂದರೆ, ಇಲ್ಲಿಯವರೆಗೆ ಅವರು ಯಾರಿಗೂ ಅಕ್ಕಿ ಹಂಚಿರಲಿಲ್ಲ. ಇವರಿಗೆ ಅಕ್ಕಿ ಹಂಚುವುದು ಗೊತ್ತಿದ್ದರೆ ಹಂಚಿರುವವರು ಈಗ ಕೇಳುವ ಹಂತಕ್ಕೆ ಬಂದು ನಿಂತಿದೆ. 'ಅಕ್ಕಿಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ, ಗುತ್ತಿಗೆದಾರರಿಲ್ಲದೆ ಕೆಲಸ ಮಾಡುವುದಕ್ಕಾಗುವುದಿಲ್ಲ' ಎಂದು ಹೇಳಿ ಯಾವುದೋ ಜೆಸಿಬಿ ಇಟ್ಟುಕೊಂಡೋ ಬೇರೆ ಮೆಷಿನ್ ಇಟ್ಟುಕೊಂಡೋ ಕೆಲಸ ಮಾಡುವ ಅಭ್ಯಾಸ ಮಾಡಿಕೊಂಡಿದ್ದಾರೆ. ಈ ಅಕ್ಕಿಯನ್ನು ಏನು ಮಾಡಬೇಕೆನ್ನುವ ಸ್ಥಿತಿ ನಿರ್ಮಾಣವಾಗಿದೆ. ಈಗಲಾದರೂ ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳಬೇಕಲ್ಲಾ ಏಕೆಂದರೆ, ನಿಮ್ಮ ಸಿಆರ್‌ಎಫ್ ಫಂಡ್ ಈಗ ಇಡೀ ವರ್ಷ ಮುಂದುವರಿದುಕೊಂಡು ಹೋಗುವ ಸ್ಥಿತಿಯಿಲ್ಲ. ಈ ರಾಜ್ಯದಲ್ಲಿ ಬಹಳ ಎಂದರೆ ಹದಿನೈದು ದಿವಸ, ತಿಂಗಳೊಳಗೆ ಮುಗಿಸಬಹುದು. ಅಲ್ಲಲ್ಲಿ ಮಳೆ ಬಿದ್ದಿದೆ, ನಿಮಗೆ ಬರ ಇಲ್ಲವೆನ್ನುವ ಸ್ಥಿತಿ ನಿರ್ಮಾಣವಾಗಿದೆ. ನಮ್ಮ ಡಿ.ಸಿ. ಗಳು ಬಹಳ ಉತ್ಪ್ರೇಕ್ಷೆ ಮಾಡಿ ವರದಿಗಳನ್ನು ಕೊಡುತ್ತಿದ್ದಾರೆ. 'ಈ ತಾಲ್ಲೂಕಿನಲ್ಲಿ ಒಳ್ಳೆಯ ಮಳೆ, ಈ ಜಿಲ್ಲೆಯಲ್ಲಿ ಒಳ್ಳೆಯ ಮಳೆ' ಯಾಗಿದೆಯೆಂಬ ವರದಿಯನ್ನು ಕೇಂದ್ರ ಸರ್ಕಾರ ಇಟ್ಟುಕೊಂಡರೆ ಅಕಸ್ಮಾತ್ ಆಗಿ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಅಷ್ಟೊಂದು ದೊಡ್ಡತನ ಪ್ರದರ್ಶನ ಮಾಡುವುದಿಲ್ಲ. ಬರಪೀಡಿತ ಪ್ರದೇಶವೆಂದು ಹಾಗೇ ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಮತ್ತೆ ನಾವೇನು ಮಾಡಬೇಕು? ನಮ್ಮ ನೈಜ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ನೋವಿನ, ಸಂಕಟದ ಮಾತನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಅಕ್ಕಿ ಮಾರಿಕೊಂಡರೋ, ಕಮೀಷನ್ ಕದ್ದರೋ, ತೆಗೆದುಕೊಂಡರೋ? ವಾಸ್ತವವಾಗಿ ಬಡವರಿಗೆ ಸಿಗಬೇಕಾಗಿದ್ದ ಈ ಅಕ್ಕಿ ಸಿಗದಿರುವಾಗ ಈ ರಾಜ್ಯದಲ್ಲಿ ಬಡವ ಯಾವ ಪಾಪ ಮಾಡಿದ್ದ? ಆತನಿಗೆ ಈ ವಿಧದಲ್ಲಿ ಅಲ್ಲದೆ ಬೇರಾವುದೇ ರೀತಿಯಲ್ಲಿ ಅಕ್ಕಿ ಕೊಡುವುದಕ್ಕಾಗುತ್ತಿರಲಿಲ್ಲ. ಕನಿಷ್ಠ ಸೊಸೈಟಿಗಳಿಂದಲೋ, ಗ್ರಾಮ ಪಂಚಾಯಿತಿಗಳಿಂದಲೋ ಸರ್ಕಾರಿ ದರದಲ್ಲಿ ಅಕ್ಕಿಯನ್ನು ನಿಮಗೆ ಮಾರಾಟ ಮಾಡಿಸುವುದಕ್ಕಾಗುತ್ತಿರಲಿಲ್ಲ. ನಿಮಗೆ ಹಂಚುವುದಕ್ಕಾಗಲಿಲ್ಲ. ನಿಜ, ನಾನು ಅವೊತ್ತು ಎಂಎಲ್‌ಎ ಆಗಿರಲಿಲ್ಲ. ಸನ್ಮಾನ್ಯ ಬಿ.ಬಿ. ಶಿವಪ್ಪನವರು ಎಂಎಲ್‌ಎ ಆಗಿದ್ದರು. 'ಜನರನ್ನು ಕರೆದುಕೊಂಡು ಬಂದು ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ.

ಜೆಸಿಬಿಯಲ್ಲಿ ಕೆಲಸ ಮಾಡಿಸುವುದಕ್ಕೆ ರೆವಿನ್ಯೂ ಮಿನಿಸ್ಟರ್ ಪರ್ಮಿಶನ್ ಕೇಳಿದ್ದೇನೆ' ಎಂದು ಅವರು ಹೇಳಿದ್ದನ್ನು ನಾನು ಓದಿದ್ದೇನೆ.

ಅದು ವಾಸ್ತವ. ನಾನೂ ಕೂಡ ಉತ್ಪ್ರೇಕ್ಷೆ ಮಾಡಿ ಮಾತನಾಡತಕ್ಕವನಲ್ಲ. ಕೆಲಸ ಮಾಡಿಸುವುದು ಕಷ್ಟ ಎಂಬ ಸ್ಥಿತಿ ಇದ್ದ ಕಾಲ ಅದು. ಪಕ್ಕದ ಆಂಧ್ರಪ್ರದೇಶದಲ್ಲೇನಾಯಿತು? ಅವರು ಹೇಗೆ ಮಾಡಿದರು? ಅವರು ಹೇಗೆ ಯುಟಿಲೈಜೇಷನ್ ಸರ್ಟಿಫಿಕೇಟನ್ನು ಕೊಟ್ಟರು? ಅವರು ಹೇಗೆ ಆ ಅಕ್ಕಿಯನ್ನು ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಿ ರಾಜ್ಯ ಸರ್ಕಾರವನ್ನು ನಡೆಸಿದರು? ಈ ನೈಜವಾದ ತಿಳುವಳಿಕೆ ಸರ್ಕಾರ ನಡೆಸುವವರಿಗೆ ಇಲ್ಲದೇ ಹೋದರೆ ಮುಂದೆ ಈ ರಾಜ್ಯದ ಗತಿ ಏನು? ಮುಂದೆ ನಿಮಗೆ ಕೊಟ್ಟಿರುವ ಅಕ್ಕಿ ಅಷ್ಟೂ ದುರುಪಯೋಗವಾಗಿದೆಯೆಂದು ಕೇಂದ್ರ ಸರ್ಕಾರದವರು ತಕರಾರು ಮಾಡಿ Entire Utilization Certificate invalid ಎಂದರೆ ನಾಳೆ ಹೋಗಿ ನೀವೇನು ಕ್ಲೈಮ್ ಮಾಡುತ್ತೀರಿ? ನಮಗೆ ಬರಗಾಲವೆಂದು ನೀವೇನು ಮೆಮೊರ್‍ಯಾಂಡಂ ಸಬ್‌ಮಿಟ್ ಮಾಡುತ್ತೀರಿ? ಈ ಸ್ಥಿತಿಗೆ ಯಾರು ಹೊಣೆ? ಮಾರಿಕೊಂಡಿರೋ, ಕಮಿಷನ್ ತೆಗೆದುಕೊಂಡರೋ ಅದು ನಮ್ಮ ಕನ್‌ಸರ್ನ್ ಅಲ್ಲವೇ ಅಲ್ಲ. ಯಾರಿಗೆ ತಲುಪಬೇಕಾಗಿತು.... ಮಾನ್ಯ ರಮೇಶ್‌ಕುಮಾರ್‌ರವರೂ ಇದು ಅನ್ಯಾಯವಾಗಿದೆಯೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅನ್ಯಾಯವಾಗಿದೆಯೆಂದು I quote him. ಮಾನ್ಯ ರೇವಣ್ಣನವರು ಮಾತನಾಡಿದ್ದಾರೆ. ಸರ್ಕಾರದ ಅಧಿಕಾರಿಗಳು ಮಾಡಿರುವ ನಿರ್ಲಕ್ಷ್ಯ, ದಡ್ಡತನವೆಂದು ಮಾನ್ಯ ಪುಟ್ಟಸ್ವಾಮಿಗೌಡರು ಹೇಳಿದ್ದಾರೆ. ಅದೇ ಹಾಸನ ಜಿಲ್ಲೆಯಲ್ಲಿ ಒಬ್ಬರು ಎಂಎಲ್‌ನ ಜಿಸಿಬಿಗಳು ಹಿಟ್ಯಾಚಿಗಳು ಇಲ್ಲದೇ ಹೋದರೆ ನಾವು ಕೆಲಸವನ್ನು ಮಾಡಿಸಲು ಆಗುವುದಿಲ್ಲವೆಂದು ಹೇಳಿದ್ದಾರೆ. ಇಂಥ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿ ಇಲ್ಲಿ ಕೂಲಿ ಇಲ್ಲ, ಜನರಿಗೆ ಕೈಗೆ ಏನೂ ಕೆಲಸ ಇಲ್ಲ ನಮಗೆ ಸಹಾಯ ಮಾಡಿ ಎಂದು ನಾಳೆ ಕೇಂದ್ರ ಸರ್ಕಾರದ ಮುಂದೆ ಹೋಗಲು ನಮಗೆ ಮಾರಲ್ ರೈಟ್ ಉಳಿಯುತ್ತದೆಯೇ ಈ ರಾಜ್ಯದಲ್ಲಿ? ಯಾರಾದರೂ ನಮ್ಮನ್ನು ಒಂದು ಪ್ರಶ್ನೆ ಕೇಳಿದರೆ ಕರ್ನಾಟಕ ಸರ್ಕಾರ ತಲೆ ಎತ್ತಿಕೊಂಡು ನಿಲ್ಲುವ ಸ್ಥಿತಿ ಇದೆಯೇ ಇವತ್ತು? ಹೋಗಲಿ ಏನಾದರೂ ಪುಣ್ಯದ ಕೆಲಸವನ್ನು ನಾವು ಮಾಡಿದ್ದೇವೆಯೇ? ಎಫ್‌ಪಿಡಿ ಗೆ ಹಾಕಿ ಅದನ್ನೇನಾದರು ಹಂಚಿದ್ದೇವೆಯೇ? ತಾವು ಆ ದೊಡ್ಡ ಕೆಲಸವನ್ನು ಮಾಡಬಹುದಿತ್ತು. ತಾವು ಹಳದಿ ಕಾರ್ಡ್‌ನ್ನು ಕೊಟ್ಟಿದ್ದಿರಿ. ಪಾಪದ ಕಾರ್ಡುಗಳನ್ನು ಕೊಟ್ಟು ಬಡವರನ್ನೆಲ್ಲಾ ಉತ್ಪ್ರೇಕ್ಷೆ ಮಾಡಿ, ಅವರನ್ನಾದರೂ ಕರೆದು ಕೊಡಬಹುದಿತ್ತು. ತೆಗೆದುಕೊಂಡು ಹೋಗಿ 15–20 ಕೆ.ಜಿ. ಸರ್ಕಾರದ ಬೆಲೆಯಲ್ಲಿ ಕೊಡುತ್ತೇವೆ, ನಿನ್ನ ಹೆಸರನ್ನೇ ಬರೆದು ಕೊಳ್ಳುತ್ತೇವೆ, ಕೆಲಸ ಮಾಡಿದ್ದೀಯಾ ಎಂದು, ಆದರೆ ಆ ಕೆಲಸವನ್ನು ಮಾಡಲೇ ಇಲ್ಲ, ಇಂಜಿನಿಯರ್ ಆಫೀಸು, ಯಾರದ್ದೋ ಅಂಗಡಿ, ಯಾರದ್ದೋ ರೈಸ್ ಮಿಲ್ಲು, ಎಲ್ಲಾ ಕಡೆಯಾಗಿದೆ, ನನ್ನ ದೃಷ್ಟಿಯಲ್ಲಿ ಅನಿವಾರ್ಯ ಕೂಡ ಆಗಿತ್ತು. ಅವತ್ತು ನೀವು ಅಕ್ಕಿಯನ್ನು ಕೊಟ್ಟು ಕೆಲಸ ಮಾಡಿರುವ ಸ್ಥಿತಿಯಲ್ಲಿ ಇರಲೇ ಇಲ್ಲ. ಕೆಲಸಗಳು ಆಗುತ್ತಿರಲಿಲ್ಲ. ನಿಮಗೆ ಕೊಟ್ಟಿದ್ದ ನಿಗದಿತ ಅವಧಿಯಲ್ಲಿ ನೀವು ಯುಟಿಲೈಜೇಷನ್ ಸರ್ಟಿಫಿಕೇಟನ್ನು ಕೊಟ್ಟು ನಿಮಗೆ ಬೇಕಾದ ಹಣವನ್ನು ತರಿಸಿಕೊಳ್ಳಬೇಕಾದರೆ ಸರ್ಕಾರಕ್ಕೆ ಏನಾದರೂ ಮಾಡಲೇ ಬೇಕಾದ ಸ್ಥಿತಿ ಇತ್ತು. ಆದರೆ ತಾವು ಸರ್ಕಾರ ನಡೆಸುವವರು ಪಾರದರ್ಶಕವಾಗಿ ಏಕೆ ವರ್ತಿಸಲಿಲ್ಲ? ಸರ್ಕಾರ ನಡೆಸುವವರು ಒಂದು ತೀರ್ಮಾನವನ್ನೇಕೆ ತೆಗೆದುಕೊಳ್ಳಲಿಲ್ಲ? ನಿಮಗೆ ಒಬ್ಬರಿಗೇ ಒಂದು

ಕಂಡೀಷನ್, ಆಂಧ್ರ ಪ್ರದೇಶದವರಿಗೆ ಬೇರೆ ಕಂಡೀಷನ್‌ನ್ನು ಕೇಂದ್ರ ಸರ್ಕಾರದವರು ಇಂಪೋಸ್ ಮಾಡಿದಾಗ ನೀವೇಕೆ ಕೇಳುವ ಧಂ ತೋರಿಸಲಿಲ್ಲ? ನೀವೇಕೆ ಲೀಡನ್ನು ತೆಗೆದುಕೊಳ್ಳಲಿಲ್ಲ? ಈ ರಾಜ್ಯ ಕೂಡ ನಾನು ಹಾಗೆ ತೆಗೆದುಕೊಂಡು ಹೋಗುತ್ತೇನೆ, ಅಕ್ಕಿಯಲ್ಲಿ ಬರುವ ನಾಲ್ಕಾಣೆ, ಎಂಟಾಣೆ ಲಾಭವನ್ನು ಸಾರ್ವಜನಿಕ ಕೆಲಸಕ್ಕೆ ಉಪಯೋಗಿಸುತ್ತೇನೆಂದು ಏತಕ್ಕಾಗಿ ಮಾಡಲಿಲ್ಲ? ಎಲ್ಲಾ ವಿಷಯದಲ್ಲೂ ನೀವು ತಲೆ ತಗ್ಗಿಸಿ ತಗ್ಗಿಸಿ ಹೀಗೆ ಮಾಡಿದರೆ ತಪ್ಪು, ಹಾಗೆ ಮಾಡಿದರೆ ತಪ್ಪು, ಅಕ್ಕಿ ಎಲ್ಲಾದರೂ ಕದ್ದು ಮಾರಿದರೆ ಯುಟಿಲೈಜೇಷನ್ ತೋರಿಸಿ ಎನ್ನುವ ಸ್ಟೇಜ್‌ಗೆ ರಾಜ್ಯವನ್ನು ತಂದರೆ ನಾಳೆ ಈ ರಾಜ್ಯದ ಗತಿ ಏನು? ಈ ದೇಶದಲ್ಲಿ ನಮ್ಮನ್ನು ಯಾರು ನಂಬುತ್ತಾರೆ? ತಾವೇನಾದರೂ ಅವಕಾಶ ಕೊಟ್ಟರೆ ಇದನ್ನು ನಾನು ಬಹಳ ವ್ಯಾಪಕವಾಗಿ ಚರ್ಚೆ ಮಾಡಲು ಹೊರಟಿದ್ದೇನೆ, ತಾವು ಅವಕಾಶವನ್ನು ಕೊಡಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ನಾನು ಬಹಳ ಜಾಗ್ರತೆಯಿಂದ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರ ಮಾತುಗಳನ್ನು ಕೇಳುತ್ತಿದ್ದೇನೆ. ಆಂಧ್ರದನ್ನು ತಾವು ಹೇಳಿದಿರಿ, ಬರಗಾಲ ಬಂದಿತ್ತು. ಕೂಲಿ ವರ್ಗದ ಜನರು ಯಾರಿದ್ದಾರೆ ಅವರಿಗೆ ಕೂಲಿಗೆ ಬದಲಾಗಿ ಕೊಡಬೇಕಾದ ಪೂರ್ತಿ ಹಣವನ್ನು ನಗದು ರೂಪದಲ್ಲಿ ಕೊಡಲು ಆಗುವುದಿಲ್ಲ, ಸ್ವಲ್ಪ cash component ಸ್ವಲ್ಪ material component food ಎಂದು ಕೊಡುತ್ತಿದ್ದರು. ಈ foodನ್ನು ತೆಗೆದುಕೊಳ್ಳುವ ಅಗತ್ಯ ಅವರಿಗೆ ಇರಲಿಲ್ಲ. ಆದ್ದರಿಂದ ಈ foodನ್ನು ಬೇರೆ ಇನ್ನೆಲ್ಲಾದರೂ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಅ ಹಣವನ್ನು ನಾವು ಅವರಿಗೆ ಪಾವತಿ ಮಾಡುವುದು ಒಂದು ವಿಧಾನವೆಂದು ಹೇಳಿದ್ದೇವೆ. ನೀವೇ ಇನ್ನೊಂದು stage ನಲ್ಲಿ ಬೇಕಾದರೆ ತರಿಸಿ ನೋಡಿ. ಇಲ್ಲಿ ನಿಮ್ಮ ಅಲಿಗೇಷನ್ ಸ್ಪೆಸಿಫಿಕ್ ಆಗಿ, ಯಾವ ಕೆಲಸವನ್ನು ಕೈಗೊಳ್ಳಬೇಕೆಂದೂ ಒಂದು ಅಂದಾಜು ಮಾಡಿ ಇಷ್ಟು ಜನ ಕೂಲಿ ಕಾರ್ಮಿಕರಿಗೆ ಅಲ್ಲಿ ಕೆಲಸ ಸಿಗುತ್ತದೆ ಎಂದು ಹೇಳಿ, ಅದಕ್ಕೆ ಇಷ್ಟು ನಗದು ಇಷ್ಟು ಆಹಾರದ ರೂಪದಲ್ಲಿ ತೆಗೆದುಕೊಳ್ಳುವುದು ಎಂದು ಹೇಳಿ, ಆ ಕೆಲಸವನ್ನೇ ಮಾಡದೆ ಆ ಇಡೀ ಆಹಾರ ಏನಿದೆ ಅದನ್ನು ಮಾರಾಟ ಮಾಡಿದ್ದಾರೆಯೇ ಅಥವಾ ಅದನ್ನು ಹೊರಗಡೆ ಮಾರಾಟ ಮಾಡಿ ಆ ಕೆಲಸವನ್ನು ಮಾಡಿದ್ದಾರೆ? You must make yourself clear.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಡೀಟೇಲ್‌ಗೆ ಹೋಗಬಾರದು, ಪ್ರಿಲಿಮಿನರಿ ಸಬ್‌ಮಿಷನ್....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದರಿಂದ ನಡೆದಂಥ ಸತ್ಯ ಘಟನೆಯನ್ನು ನಿಮಗೆ ಹೇಳುತ್ತೇನೆ. ನಾನು ಜಗದೀಶ್ ಶೆಟ್ಟರ್‌ರವರು ಮತ್ತು ಬೆಲ್ಲದ್‌ರವರು ಹೋದ ವರ್ಷ ಬರಗಾಲ ಕಾಮಗಾರಿಯನ್ನು ನೋಡಬೇಕೆಂದು ಧಾರವಾಡ ತಾಲ್ಲೂಕಿನ ಮುಗದ ಗ್ರಾಮಕ್ಕೆ ಹೋದೆವು. ಅಲ್ಲಿನ ಕೆರೆಯ ಹೂಳನ್ನು ಎತ್ತಲು ಐದು ಲಕ್ಷ ರೂಪಾಯಿ ಮಂಜೂರಾಗಿತ್ತು. ಸ್ಥಳದಲ್ಲಿ ಸುಮಾರು ಐದುನೂರು ಜನ ಗ್ರಾಮಸ್ಥರು ಬಂದರು. ಎಂಟೇ ದಿವಸ ಕೆಲಸ ಮಾಡಿರುವುದು, ಐವತ್ತು ಸಾವಿರವೂ ಖರ್ಚಾಗಿಲ್ಲವೆಂದು ಊರಿನ ಜನರು ಹೇಳಿದರು. ಅಲ್ಲೇ ಮುಖ್ಯಮಂತ್ರಿಗಳಿಗೆ ನಾನು ದೂರವಾಣಿ ಮಾಡಿದೆ, ಹೆಲಿಕ್ಯಾಪ್ಟರ್ ತೆಗೆದುಕೊಂಡು ಬನ್ನಿ, ಕೆಲಸ ಮುಗಿದೆಯೆಂದು ಐದು ಲಕ್ಷ ಬಿಲ್ಲನ್ನು ತೆಗೆದುಕೊಂಡಾಗಿದೆ, ಖರ್ಚು ಆಗಿರುವುದು ಐವತ್ತೇ

ಸಾವಿರ, ಮಧ್ಯಾಹ್ನ ಊಟ ಮಾಡುತ್ತಿದ್ದವರು ಮಾತನಾಡಿ ಸಂಬಂಧಪಟ್ಟಂಥ ಜಿಲ್ಲಾ ಸಚಿವರಿಗೆ ಆದೇಶ ಮಾಡಿದರು, ಅವರು ಬೇರೆ ಕಾರಣಕ್ಕೋಸ್ಕರ ಹೆಲಿಕ್ಯಾಪ್ಟರ್‌ನಲ್ಲಿ ಬರಲು ಆಗಲಿಲ್ಲ, ನಾವು ಇದೆಲ್ಲವನ್ನೂ ಮುಖ್ಯಮಂತ್ರಿಗಳಿಗೆ ಲಿಖಿತ ಮೂಲಕ ಒದಗಿಸಿಕೊಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ಹಿರಿಯರಾದ ಮಾನ್ಯ ರಮೇಶ್‌ಕುಮಾರ್ ರವರು ಹೇಳಿದನ್ನು ನಾನು ಒಪ್ಪುತ್ತೇನೆ. ಆದರೆ, ತಾವು ಮೋಷನ್‌ನ್ನು ಅಲೋ ಮಾಡಿದಾಗ ಈ ವಿವರವಾದ ಚರ್ಚೆಗೆ ಬರಬೇಕು ಎಂಬ ಒಂದೇ ಬಯಕೆಯಲ್ಲಿ ನಾನು ಹಿಂಟ್ ಕೊಟ್ಟುಕೊಂಡು ಹೋಗುತ್ತಿದ್ದೇನೆ. ನನ್ನದು ಪ್ರಿಲಿಮಿನರಿ ಸಬ್‌ಮಿಷನ್. ಏನೇನು ಚರ್ಚೆ ಮಾಡಲು ನಮಗೆ ಸ್ಕೋಪ್ ಇದೆ ತಾವೇನಾದರೂ ಈ ಮೋಷನ್‌ನನ್ನು ಆಲೋ ಮಾಡಿದರೆ, ತಾವು ಅಲೋ ಮಾಡಿ, ಆಂಧ್ರದಲ್ಲಿ ಏನಾಗಿದೆ? ಬೇರೆ ರಾಜ್ಯದಲ್ಲಿ ಏನಾಗಿದೆ ಎಂಬ ಬಗ್ಗೆ ಎಂಬ ಬಗ್ಗೆ we will come out with facts. ಈ ಸಭೆಯ ಮುಂದೆ ಬರುತ್ತೇವೆ. ಅವರೇನು ಸರ್ಕಾರ ನಡೆಸಿದ್ದಾರೆ ಅದರಿಂದ ಒಳ್ಳೆಯದಾಗಿದೆಯೋ, ಕೆಟ್ಟದ್ದು ಆಗಿದೆಯೋ, ಕೆಲಸ ಹಾಗೆಯೇ ಇದೆಯೋ, ಅಥವಾ ಅರ್ಧಂಬರ್ಧ ಕೆಲಸವಾಗಿದೆಯೋ, ಕಂಟ್ರಾಕ್ಟರ್ ಹೊಡೆದು ಹಾಕಿದ್ದಾರೋ, ಅಧಿಕಾರಿಗಳು ಹೊಡೆದು ಹಾಕಿದ್ದಾರೋ, ನೀವು ಇದನ್ನು ಜನರಿಗೆ ನೇರವಾಗಿ ಹಂಚಬಹುದಾಗಿತ್ತೋ ಇಲ್ಲವೋ ಎಂಬ ಬಗ್ಗೆ we will come to that. ತಾವು ಕನ್‌ವಿನ್ಸ್ ಆಗಬೇಕು, ಈ ಎರಡು main issues involved ಒಂದು ಬಳಸಬೇಕಾದ ರೇಷನ್‌ನನ್ನು ಕೂಲಿ ಮಾಡುವವರಿಗೆ ತಲುಪಿಸುವಲ್ಲಿ ವಿಫಲರಾಗಿದ್ದೇವೆ, ಕೂಲಿ ಮಾಡಿಸಿದ್ದೀರೋ ಇಲ್ಲವೋ ಎಂಬ ಬಗ್ಗೆ ನಿಮ್ಮ ಹತ್ತಿರ ಇರುವ ಲೆಕ್ಕ ತಪ್ಪು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಮಾಧುಸ್ವಾಮಿಯವರೆ, You are a practicing lawyer. Misapplication ಬೇರೆ. Misappropriation ಬೇರೆ, misutiliization ಬೇರೆ, embezzlement of funds ಬೇರೆ. ನೀವು ಯಾವ ಅಲಿಗೇಷನ್‌ನನ್ನು ಮಾಡುತ್ತಿದ್ದೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ:- ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನೀವೇನು ಮ್ಯಾನುಯಲ್ ಲೇಬರ್‌ರನ್ನು ಕ್ರಿಯೇಟ್ ಮಾಡಿದ್ದಿರಿ that is a false list.. ನಾನು ಇಷ್ಟು ಜನಕ್ಕೆ ಕೂಲಿಯನ್ನು ಕೊಟ್ಟು ಕೆಲಸ ಮಾಡಿಸಿದ್ದೇನೆ ಎಂಬ ಲಿಸ್ಟೇ ಇವತ್ತು ನಂಬುವಂಥ ಲಿಸ್ಟ್ ಅಲ್ಲ. ಏಕೆಂದರೆ ನೀವು ಅಲ್ಲಿ ರೇಷನ್‌ನ್ನು ಕೊಟ್ಟಿಲ್ಲ. ನೀವು 67 ಪರ್‌ಸೆಂಟ್ ರೇಷನ್‌ನ್ನು ಕೊಟ್ಟು ಮಿಕ್ಕಿದ್ದನ್ನು ಕ್ಯಾಶ್ ಕೊಟ್ಟಿದ್ದೇವೆ ಎಂದೇನು ಬರೆದುಕೊಂಡಿದ್ದೀರಿ ಅಲ್ಲಿ ಕೆಲಸ ಆಗಿದೆಯೆಂದು ತಿಳಿದುಕೊಳ್ಳಲು ಸಾಧ್ಯವೇ ಇಲ್ಲ. ವರ್ಕ್ ನಾವ್ಯಾರೂ ನಿಗದಿ ಮಾಡಿದ ಪ್ರಮಾಣದಲ್ಲಿ ನಡೆಯಲು ಸಾಧ್ಯವೇ ಇಲ್ಲದ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿದ್ದೇವೆ. ಕೆಲಸ ಆಗಿಲ್ಲ. I directly charge. ಕೆಲಸಗಳಲ್ಲಿ ನೀವೇನು ಪಟ್ಟಿಯನ್ನು ಬರೆದುಕೊಂಡು ಬಂದಿದ್ದೀರಿ ಅ ಪ್ರಮಾಣದಲ್ಲಿ ಕೆಲಸವಾಗಿಲ್ಲ. ಅಕಸ್ಮಾತ್ ಅಲ್ಲ ಸ್ವಲ್ಪ ಕೆಲಸವಾಗಿರುವುದರಿಂದ ಸರ್ಕಾರದ ಅಧಿಕಾರಿಗಳು ಬೂಸ್ಟ್ ಅಫ್ ಮಾಡಿ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಏಕೆ ಕೊಟ್ಟಿದ್ದಾರೆ? ಸ್ಪೀಡ್ ಒಂದು, ಇನ್ನೊಂದು ಯುಟಿಲೈಜೇಷನ್ ಮತ್ತೊಂದು ಆಸೆಆಮಿಷ. ಈ ಆಸೆ ಆಮಿಷ ಯಾವಾಗ ಬರುತ್ತದೆ? ಯಾವುದಾದರೊಂದು ಧಂದೆಯನ್ನು ಟೇಬಲ್ ಕೆಳಗೆ ಮಾಡಲು ಪ್ರಾರಂಭ ಮಾಡಿದಾಗ; ಅದು ಯಾವಾಗ ಬರುತ್ತಿರಲಿಲ್ಲ ನೀವು ಸರ್ಕಾರವನ್ನು

ಪಾರದರ್ಶಕವಾಗಿ ನಡೆಸಿದ್ದಾಗ, ನಿಮಗೆ ಗೊತ್ತಿತ್ತು practical difficulty. You are aware ಈ ಸ್ಟೇಟನ್ನು ನಡೆಸಬೇಕೆಂದು...

Sri K.R. Ramesh Kumar:- Sir, I rise to a point of order. ಅವರು ಬಹಳ ಬುದ್ಧಿವಂತರು, ಬೇಕೆಂತಲೇ ಹೇಳುತ್ತಿಲ್ಲ. ಅವರು ಒಂದು ಹಂತದಲ್ಲಿ ಯುಟಿಲೈಜೇಷನ್ ಸರ್ಟಿಫಿಕೇಟ್ ರಾಜ್ಯ ಸರ್ಕಾರದವರು ಕೊಟ್ಟು ಅಲ್ಲಿಂದ ಪುನಃ ಅಕ್ಕಿಯನ್ನು ತರಿಸಿಕೊಂಡಿದ್ದಾರೆ ಎಂದು ಹೇಳುತ್ತಾ, misutilization ಆಗಿದೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. ಮತ್ತೊಂದು ಹಂತದಲ್ಲಿ ಮಾತನಾಡುವ ವೇಳೆಗೆ ಯಾವುದೂ ಕೆಲಸವಾಗಿಲ್ಲ embezzlement of funds ಆಗಿದೆ ಎನ್ನತಕ್ಕ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ. ನಾವು ರೂಲ್ 60ರ ಕೆಳಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಾದರೂ ಕೂಡ it should be a specific issue. One specific matter. ಒಂದು ಖಚಿತವಾದಂಥ ನಿಲುವನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. You can't hop. ನೀವು ಒಂದರಿಂದ ಒಂದಕ್ಕೆ jump ಮಾಡುವುದಕ್ಕಾಗುವುದಿಲ್ಲ. ನಿಮ್ಮ ಹತ್ತಿರ ಮಾಹಿತಿ ಇದ್ದೂ ಬೇಕೆಂದೇ ಹೀಗೆ ಮಾಡುತ್ತಿದ್ದೀರಿ you are a very wise party leader,

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರು ತಮ್ಮ point of order allow ಮಾಡಿದರು ಎಂದು ತಿಳಿದುಕೊಂಡು I correct myself. ಇಲ್ಲಿ ವಾಸ್ತವನೇ ಬೇರೆ, ನಡೆದಿರುವುದೇ ಬೇರೆ, ಖಂಡಿತವಾಗಿ ಆ ಚರ್ಚೆಗೆ ನಾನು ಇಳಿದರೆ ತಾವು ಅರ್ಧ ಗಂಟೆ ಅವಕಾಶ ಕೊಡಬೇಕಾಗುತ್ತದೆ. ತಾವು ಒಪ್ಪಿಕೊಳ್ಳುವುದಾದರೆ, ಈ ಮೋಷನ್‌ನನ್ನು ಅಲೋ ಮಾಡುವುದಾದರೆ ನಾನು ಅಂಕಿಅಂಶದ ಸಹಿತ ಇಲ್ಲಿ ಬಂದು ಮಾತನಾಡಲು ತಯಾರಾಗಿದ್ದೇನೆ. ಎಲ್ಲೆಲ್ಲಿ ದುರುಪಯೋಗವಾಗಿದೆ, ಎಲ್ಲೆಲ್ಲಿ ಕಡಿಮೆ ಉಪಯೋಗವಾಗಿದೆ, ಎಲ್ಲೆಲ್ಲಿ ಅಕ್ಕಿ ಬಾರದೆಯೇ ಲೆಕ್ಕ ಬರೆದಿದ್ದಾರೆ, ಎಲ್ಲಿ ಅಕ್ಕಿಯನ್ನು ಮಾರಿದ್ದಾರೆ, I will come to that, when? ತಾವು ಈ ಮೋಷನ್‌ನನ್ನು ಅಲೋ ಮಾಡಬೇಕಾಗುತ್ತದೆ. ತಮಗೆ ಹೇಳಲು ಹೊರಟಿರುವುದು ಒಂದೇ, ಈಗ ನಡೆದಿರುವ ವ್ಯವಹಾರದಲ್ಲಿ ಬರಗಾಲದಲ್ಲಿ ನಾವು ಬಡವರಿಗೆ ಕೊಡಬೇಕಾದ ಅಕ್ಕಿಯನ್ನು ಅವರಿಗೆ ತಲುಪಿಸುವುದಕ್ಕೆ ವಿಫಲರಾಗಿದ್ದೇವೆ. ಇನ್ನೊಂದು ಕಡೆ ಅದು ಕಾಳಸಂತೆಯಲ್ಲಿ ಮಾರಾಟವಾಗಿದೆ. ಅದು ಸರ್ಕಾರ ನಡೆಸುವವರು ಮಾಡಿದರೋ, ಅಧಿಕಾರಿಗಳು ಮಾಡಿದರೋ, ಕಂಟ್ರಾಕ್ಟರ್‌ಗಳು ಮಾಡಿದರೋ ಅದಕ್ಕೆ ತಾವು ಅವಕಾಶ ಕೊಟ್ಟರೆ ಚರ್ಚೆಯಲ್ಲಿ ಹೇಳಲು ನಾವು ತಯಾರಿದ್ದೇವೆ. ಮೂರನೆಯದಾಗಿ, ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ, ಇನ್ನೊಂದು ಅಲಾಟ್‌ಮೆಂಟ್ ನಿಮ್ಮ ಮುಂದೆ ಪೆಂಡಿಂಗ್ ಇದೆ. ಈ ಹಗರಣ ಪ್ರಾರಂಭವಾದ ಮೇಲೆ ಅಕ್ಕಿ ಇಲ್ಲದೆಯೇ ಅಕ್ಕಿ ತೆಗೆದುಕೊಂಡು ಹೋಗಿ ಕೆಲಸ ಮಾಡುವವರು ಯಾರೂ ಬರುತ್ತಿಲ್ಲ. ನೀವು ಅಕ್ಕಿ ಇಲ್ಲದೆಯೇ ಕೆಲಸ ಮಾಡಲು ಆಗುತ್ತಿಲ್ಲ. ಇವತ್ತೇನು ತುರ್ತ ಇದೆ ಈ ಮೋಷನ್‌ನನ್ನು ಮೂವ್ ಮಾಡಲು ಎಂದರೆ, ಈಗ ಏನು ಜಿಲ್ಲೆಗಳಲ್ಲಿ ಈಗಲೂ ಕಾಮಗಾರಿ ಮಾಡಲು ಬಾಕಿ ಉಳಿದಿದೆ ಆ ಕೆಲಸ ಮಾಡಲಾದರೂ ಒಂದು ಆದೇಶವಾಗಬೇಕಲ್ಲಾ? ಆ ಕೆಲಸವಾದರೂ ಪಾರದರ್ಶಕವಾಗಿ ಆಗಬೇಕಾಗಿತ್ತಲ್ಲಾ, ಆಗಲಿಲ್ಲ. ಇವತ್ತೂ ಆಗುವ ಸ್ಥಿತಿಯಲ್ಲಿಲ್ಲ. ನಾವೇನು ಮಾಡಬಹುದಾಗಿತ್ತು? ಎಲ್ಲಿ ತಪ್ಪಾಗಿದೆ? ಖಂಡಿತವಾಗಿ ನಾವು ಈ ಸಭೆಗೆ ನಮಗೆ ತಿಳುವಳಿಕೆ ಇರುವಷ್ಟು ನಮ್ಮ ಜ್ಞಾನ ಇರುವಷ್ಟು ಹೇಳಲು ಮಾಹಿತಿಗಳನ್ನು

ಸಂಪಾದನೆ ಮಾಡಿಕೊಂಡಿದ್ದೇವೆ. ದೋಷ ಯಾವುದು ಇದೆ, ಎಲ್ಲೆಲ್ಲಿ ಆಗಿದೆ ಅದನ್ನೂ ಕೂಡ ನಮ್ಮ ಶಕ್ತಿ ಇರುವಷ್ಟು ನಾವು ಇಲ್ಲಿ ಪ್ರತಿಪಾದಿಸುತ್ತೇವೆ, ಯಾವಾಗ ಮಾಡಬಹುದು ಇದನ್ನೆಲ್ಲಾ ನಾನು ಎಂದರೆ, ತಾವು ನಮಗೆ ಇಲ್ಲೊಂದು ಆ ಮೈನ್ ಇಶ್ಯೂವನ್ನು ಚರ್ಚೆ ಮಾಡಲು ಈ ಮೋಷನ್‌ನನ್ನು ಅಲೋ ಮಾಡಿದ್ದೇವೆಂದು ಅಧ್ಯಕ್ಷರ ಪೀಠದಿಂದ ಹೇಳಿದಾಗ. ನಾವು ತಮಗೆ ಒತ್ತಿ ಒತ್ತಿ ಹೇಳುತ್ತೇವೆ ಗಂಡಾಂತರಕಾರಿಯಾದ ಸ್ಥಿತಿಯನ್ನು ನಾವು ಕರ್ನಾಟಕದಲ್ಲಿ ಮಾಡಿದ್ದೇವೆ.

4.10 ಪಿಎಂ

ಯಾರನ್ನು ನಾಲ್ಕು ವರ್ಷಗಳ ಕಾಲ ಸಲಹುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಿರೋ, ಅವನ ಕೈಗೆ ಹೋಗಬೇಕಾದ ಅನ್ನವನ್ನು ಕಿತ್ತುಕೊಂಡು ಸಂತೆಯಲ್ಲಿ ಮಾರಿಸಿದ್ದೀರಿ. ಇದರಲ್ಲಿ ಯಾರ್‍ಯಾರು ಜವಾಬ್ದಾರರು? ನೀವು ನನಗೆ ಅಲೋ ಮಾಡಿ, ಆಗ ನಾನು ಅದರ ಬಗ್ಗೆ ಮಾತನಾಡುತ್ತೇನೆ. ಮುಂದಿನ 15 ದಿವಸ ಅಥವಾ ಒಂದು ತಿಂಗಳಲ್ಲಿ ತುರ್ತಾಗಿ ಏನೊಂದು ಕೆಲಸ ಕಾರ್ಯಗಳು ಆಗಬೇಕಾಗಿವೆಯೋ, ಅದೂ ಕೂಡ standstill positionಗೆ ಬರುವಂತಹ ಸ್ಥಿತಿ ನಿರ್ಮಾಣವಾಗಿರುವುದರಿಂದ, ತಾವು ಈ ಮಾತನ್ನು ಅತ್ಯಂತ ಜರೂರು ಎಂದು ತಿಳಿದುಕೊಂಡು, ಈ ಮೋಷನ್ ಅನ್ನು ಅಲೋ ಮಾಡಲಿಕ್ಕೆ ಒಪ್ಪಿಕೊಳ್ಳಬೇಕು. ಇದರಲ್ಲಿ ಬೇಕಾದಷ್ಟು ವಿಷಯಗಳು ಚರ್ಚೆ ಮಾಡಲಿಕ್ಕಿದೆ. ನಮ್ಮ ಹತ್ತಿರ ಕಡತಗಳಿವೆ. ತಾವು ಕನ್‌ವೀನ್ಸ್ ಆಗಿದ್ದೀರಿ ಎಂದು ತಿಳಿದುಕೊಂಡು, ಈ ಮೋಷನ್ ಅನ್ನು ಅಲೋ ಮಾಡಬೇಕು ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಕೇವಲ ಒಂದೇ ಒಂದು ನಿಮಿಷ. ನಾನು ಜಾಸ್ತಿ ಸಮಯವನ್ನೇನೂ ತೆಗೆದುಕೊಳ್ಳುವುದಿಲ್ಲ. ಈ ನಿಲುವಳಿ ಸೂಚನೆಯನ್ನೇನು ನಾವು ಕಳುಹಿಸಿದ್ದೇವೋ ಇದು ಬಹಳ ಪ್ರಾಮುಖ್ಯವಂಥದ್ದು, ಬಹುಶಃ ಬಿಹಾರದಲ್ಲಿ ಮೇವು ಹಗರಣ ಏನಾಯಿತು. ಅದನ್ನು ಮೀರಿಸಿರತಕ್ಕಂಥದ್ದು ಈ ಅಕ್ಕಿ ಕಾಳಿನ ಹಗರಣವಾಗಿದೆ. ಇದರ ಬಗ್ಗೆ ಸಮಗ್ರವಾದ ಚಿತ್ರವೊಂದನ್ನು ನಾವು ಇಲ್ಲಿಗೆ ಕೊಡಬೇಕಾಗುತ್ತದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾಡಬೇಕು ಎಂಬುದನ್ನೂ ಸಹಾ ಹೇಳಿ ಬಿಟ್ಟಿದ್ದಾರೆ. ಆಡಳಿತ ಪಕ್ಷದ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳು ನಾವು ಈಗಾಗಲೇ ಏನು ಮಾಡಿದ್ದೇವೆ ಎಂಬುದನ್ನೂ ಸಹ ಹೇಳಿದ್ದಾರೆ. ಇದು ಒಂದು ರೀತಿಯಲ್ಲಿ 'ಚರ್ಚೆ ಮುಕ್ತಾಯ' ಎನ್ನುವ ರೀತಿಯಲ್ಲಿ ಆಗುತ್ತಿದೆ. ಅದು ಆಗಬಾರದು. ದಯುಮಾಡಿ ಸಂಪೂರ್ಣವಾಗಿ ಈ ಬಗ್ಗೆ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ಸಾಕಷ್ಟು ವಿಚಾರ ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ....

ಅಧ್ಯಕ್ಷರು:- ನಾನು ಮಾತನಾಡಲು ಮಾನ್ಯ ಈಶ್ವರಪ್ಪನವರನ್ನು ಕರೆದಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರು ನಿಲುವಳಿ ಸೂಚನೆ ಕಳುಹಿಸಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಅವರೂ ಕೂಡ ಒಂದು ಪಾರ್ಟಿಗೆ ಸೇರಿದವರಾಗಿದ್ದಾರೆ. ನಮ್ಮಲ್ಲಿ ಒಂದು ಸತ್ ಸಂಪ್ರದಾಯ ಇದೆ. ಇಂತಹ ಪ್ರಮುಖವಾದಂತಹ ವಿಷಯಗಳ ಬಗ್ಗೆ ಸದನದಲ್ಲಿ ಪ್ರಸ್ತಾಪವಾದಾಗ, ಯಾವುದೋ ವಿಶೇಷವಾದ ಕಾರಣಕ್ಕೆ ಸಹಿ ಮಾಡದಿದ್ದರೂ ಸಹ, ಅವರೊಂದು ಪಕ್ಷವನ್ನು ಮಾಡುತ್ತಿರುವುದರಿಂದ ದಯಮಾಡಿ ಅವರಿಗೂ ಕೂಡ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಅವರು ಸ್ವಲ್ಪ ತಡವಾಗಿ ಬಂದಿದ್ದರಿಂದ ಅವರು ಸಹಿ ಹಾಕಲಿಕ್ಕೆ ಆಗಲಿಲ್ಲ. ಸದನದಲ್ಲಿ ನಡೆದುಕೊಂಡು ಬಂದಿರುವ ಸತ್ ಸಂಪ್ರದಾಯದಂತೆ ಅವರಿಗೂ ಕೂಡ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ಶ್ರೀರಾಮರೆಡ್ಡಿಯವರೇ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೇ, ಸಾಕಷ್ಟು ವಿಚಾರ ಇದರ ಬಗ್ಗೆ ಚರ್ಚೆಯಾಗಿದೆ. ನಾವು ಈ ಮೋಷನ್ ಅನ್ನೇನು ಕಳುಹಿಸಿದ್ದೇವೋ, ಅದು ಕೂಲಿಗಾಗಿ ಕಾಳು ಎಂಬ ಯೋಜನೆಯೇ ದುರುಪಯೋಗ ಆಗಿರತಕ್ಕಂಥದ್ದರ ಬಗ್ಗೆ ಇದೆ. ಆ ಯೋಜನೆಯ ಕೇವಲ ಒಂದು ಅಂಶದ ಬಗ್ಗೆ ಮಾತ್ರ ಅದು ಇಲ್ಲ. ನಾನು ಈ ವಿಚಾರವನ್ನು ಏತಕ್ಕಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇವಲ ನಾಲ್ಕು ಅಂಶಗಳನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಮೊದಲನೆಯದಾಗಿ, ಕೂಲಿಗಾಗಿ ಕಾಳು ಯೋಜನೆಯಲ್ಲಿ ದುರುಪಯೋಗವಾಗಿದೆ. ಅದು ಯಾವ ರೀತಿ ಆಗಿದೆ ಎಂದರೆ, 17 ಸಾವಿರ ಮೆಟ್ರಿಕ್ ಟನ್ ಅಕ್ಕಿ ಇವತ್ತು ಆ ಯೋಜನೆಗಾಗಿ ಎಂದು ಮುಡಿಪಿಟ್ಟಿದಂತಹ ಅಕ್ಕಿಯ ಉಪಯೋಗವಾಗದೇ ಅದನ್ನು ವಿದೇಶಕ್ಕೆ ರವಾನಿಸಲಾಗಿದೆ. ಇದರ ಬಗ್ಗೆ ವಿವರವಾಗಿ ಚರ್ಚೆಯಾಗಬೇಕು. ಕೂಲಿ ಮಾಡುವವರಿಗೆ ಅಕ್ಕಿ ಕೊಡುತ್ತೇವೆ ಎಂದು ಹೇಳಿ, ಕೆಲಸ ಮಾಡಿಸಿ, ಅವರಿಗೆ ಅಕ್ಕಿಯನ್ನೇ ಕೊಡದಿರತಕ್ಕಂಥದ್ದು ಮಹಾನ್ ದ್ರೋಹ ಮತ್ತು ಪಾಪದ ಕೆಲಸವಾಗಿದೆ. ಅವರಿಗಾಗಿ ಎಂದು ಯಾವ ಹೆಸರಿನಲ್ಲಿ ನೀವು ಅಕ್ಕಿಯನ್ನು ತೆಗೆದುಕೊಂಡು ಬಂದಿರೋ, ಅದು ವಿದೇಶದಿಂದ ತೆಗೆದುಕೊಂಡು ಬಂದಿರೋ, ಕೇಂದ್ರದಿಂದ ತೆಗೆದುಕೊಂಡು ಬಂದಿರೋ, ರಾಜ್ಯದಿಂದ ತೆಗೆದುಕೊಂಡು ಬಂದಿರೋ ಅಥವಾ ಸಾಲ ತೆಗೆದುಕೊಂಡು ಬಂದಿರೋ, ಅದು ಬೇರೆ ವಿಚಾರ, ಅಂದರೆ ಯಾರ ಹೆಸರಿನಲ್ಲಿ ನೀವು ಅ ಅಕ್ಕಿಯನ್ನು ತೆಗೆದುಕೊಂಡು ಬಂದಿರೋ, ಆ ಅಕ್ಕಿ ಅವರಿಗೆ ತಲುಪಿಲ್ಲ ಎನ್ನುವುದನ್ನು ನೀವೇ ಸ್ವತಃ ಒಪ್ಪಿದ್ದೀರಿ. ಎಲ್ಲಾ ದಾಖಲಾತಿಗಳು ಮತ್ತು ವಿಚಾರಗಳು ಅದರ ಬಗ್ಗೆ ಇದೆ. ಅದು ದುಡಿಯತಕ್ಕಂಥ ಜನರಿಗೆ ಮತ್ತು ಕೂಲಿ ಮಾಡತಕ್ಕಂಥ ಜನರಿಗೆ ಮತ್ತು ಶ್ರಮ ಜೀವಿಗಳಿಗೆ ಈ ಯೋಜನೆಯಲ್ಲಿ ಆಗಿರತಕ್ಕಂಥ ಒಂದು ಮಹಾನ್ ದ್ರೋಹವಾಗಿದೆ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಕೂಲಿಕಾರರಿಗೆ ಕನಿಷ್ಟ ಇಂತಿಷ್ಟು ಲೇಬರ್ ಡೇಸ್ ಎಂದು ಕೆಲಸದ ದಿನಗಳನ್ನು ಸೃಷ್ಟಿ ಮಾಡುತ್ತೇವೆ ಎಂದು ಹೇಳಿದಂತಹ ನೀವು, ಜನರಿಗೆ ಕೆಲಸ ಕೊಡುತ್ತೇವೆ ಎಂದು ಹೇಳಿದಂತಹ ನೀವು, ಆ ಕೆಲಸ ಕೊಡದೇ ಬರೀ ಮೆಶಿನ್‌ಗಳಿಂದ, ಅಂದರೆ ಜೆ.ಸಿ.ಬಿ., ಹಿಟಾಚಿ ಇತ್ಯಾದಿ ಮೆಶಿನ್‌ಗಳಿಂದ ಕೆಲಸ ಮಾಡಿಸಿದ್ದೀರಿ. ಇದು ಅದಕ್ಕಿಂತ ದ್ರೋಹದ ಕೆಲಸವಾಗಿದೆ. ಹಾಗಾಗಿ ಇದರ ಬಗ್ಗೆ ವಿವರವಾಗಿ ಚರ್ಚೆಯಾಗಬೇಕು ಅನ್ನುವುದು ನಮ್ಮ ಅಗ್ರಹವಾಗಿದೆ. ಇದೆಲ್ಲಕ್ಕಿಂತಲೂ ಮಹಾ ಪಾಪದ ಕೆಲಸ ಕೇಂದ್ರ ಮತ್ತು ರಾಜ್ಯಗಳೆರಡೂ

ಕಡೆಯಿಂದ ನಡೆದಿದೆ. ರಾಜ್ಯ ಸರ್ಕಾರದವರು Utilisation Certificate ಕೊಟ್ಟರೆ, ಕೇಂದ್ರ ಸರ್ಕಾರದವರು ಅದನ್ನು ಹೇಗೆ ಒಪ್ಪಿದರು? 11 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉಪಯೋಗವಾಗಿದೆ ಎಂದು ರಾಜ್ಯದವರು ಒಂದು Utilisation Certificate ಕೊಟ್ಟಿದ್ದಾರೆ. ಅದರಲ್ಲಿ ಅಟೆಂಡೆನ್ಸ್ ಇರುತ್ತದೆ. ಅಟೆಂಡೆನ್ಸ್ ಸಮೇತ ಕೊಟ್ಟಿದ್ದಾರೆ, ಇಂಥಿಂಥವರು ಕೆಲಸಕ್ಕೆ ಬಂದಿದ್ದಾರೆ ಎಂದು ಹೆಸರುಗಳ ಸಮೇತ ಬರೆದು, ಅದನ್ನು ಅಪ್ರೂವಲ್ ಮಾಡಿಸಿ, ಅಟೆಂಡೆನ್ಸ್ ಕೊಟ್ಟು, ಅದನ್ನು Central Governmentಗೆ ಕಳುಹಿಸಿ, ಅಲ್ಲಿ ಇವರು ಅದನ್ನು Utilisation Certificate ಎಂದು ಅಪ್ರೂವಲ್ ಮಾಡಿಸಿದ್ದಾರೆ. ಕೇಂದ್ರ ಸರ್ಕಾರ ಹೇಗೆ ಇದನ್ನು ಕಣ್ಣು ಮುಚ್ಚಿಕೊಂಡು ಅಪ್ರೂವ್ ಮಾಡಿತು? ಅವರೂ ಕೂಡ ಇದರಲ್ಲಿ ಭಾಗಿಗಳಲ್ಲವೇ? ಇದು ಇವತ್ತು ಚರ್ಚೆಯಾಗ ಬೇಕಾಗಿರತಕ್ಕಂಥ ವಿಚಾರವಾಗಿದೆ. ಈ ನಾಲ್ಕು ಅಂಶಗಳು ಬಹಳ ಗಂಭೀರವಾಗಿರತಕ್ಕಂಥ ಕಾರಣಕ್ಕೋಸ್ಕರ, ಈ ಸದನಕ್ಕೆ ಅದನ್ನು ಚರ್ಚೆ ಮಾಡತಕ್ಕಂಥ ಎಲ್ಲಾ ಹಕ್ಕು ಇದೆ. ಅದಕ್ಕೆ ತಾವು ಅವಕಾಶ ಮಾಡಿ ಕೊಟ್ಟರೆ, ಖಂಡಿತವಾಗಿ ಎಲ್ಲಾ ವಿವರಗಳನ್ನು ಚರ್ಚೆ ಮಾಡಬಹುದು. ಇದರಲ್ಲಿ ಯಾರ್‍ಯಾರು ಶಾಮೀಲಾಗಿದ್ದಾರೆ? ಯಾರು ಇದರಲ್ಲಿ ಏನೇನು ಉಪಯೋಗ ಪಡೆದಿದ್ದಾರೆ? ಯಾರ್‍ಯಾರು ಇದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎನ್ನತಕ್ಕಂಥ ಅಂಶ ತಮಗೆ ಸ್ಪಷ್ಟವಾಗಿ ಮನವರಿಕೆ ಮಾಡಿಕೊಡಲಿಕ್ಕಾಗುತ್ತದೆ. ಕರ್ನಾಟಕ ರಾಜ್ಯದ ಜನತೆಗೆ ನಾವೆಲ್ಲರೂ ಸೇರಿ ಏನೊಂದು ಉತ್ತರವನ್ನು ಹೇಳಬೇಕೆಂದಿದ್ದೇವೋ, ಆ ಜನತೆಗೆ ಇವತ್ತು ಆ ಮಾಹಿತಿಯನ್ನು ಪಡೆಯುವುದಕ್ಕೆ ಹಕ್ಕಿದೆ. ಈ ಯೋಜನೆ ಹೇಗೆ ದುರುಪಯೋಗವಾಗಿದೆ ಎಂಬುದರ ಬಗ್ಗೆ ನಾವು ವಿವರವಾಗಿ ಚರ್ಚೆಯ ಸಂದರ್ಭದಲ್ಲಿ ಹೇಳಬಹುದು. ಅದಕ್ಕಾಗಿ ತಾವು ದಯವಿಟ್ಟು ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

+**ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):-** ಮಾನ್ಯ ಅಧ್ಯಕ್ಷರೇ, ಈ ಅಕ್ಕಿ ಹಗರಣದ ಬಗ್ಗೆ ಬಹಳ ಚರ್ಚೆ ಇಲ್ಲಿ ಆಗುತ್ತಿದೆ. ಆದರೆ ಎಷ್ಟೆಷ್ಟರ ಮಟ್ಟಿಗೆ ಭ್ರಷ್ಟಾಚಾರಗಳಾಗಿದೆ ಎಂಬುದರ ಬಗ್ಗೆ ಸಿಓಡಿ ಅಧಿಕಾರಿಗಳು ಆಗಲೇ ಪತ್ರಿಕಾ ಗೋಷ್ಠಿ ನಡೆಸಿ, ಇದು 'ಹಡಗಿನಿಂದ ಆಫ್ರಿಕಾ ಸೇರಿದ ಬರ ಪರಿಹಾರದ ಅಕ್ಕಿ' ಎಂಬುದನ್ನು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಸಿಓಡಿನವರು 'ಜಿಲ್ಲಾಡಳಿತವು ತನ್ನ ವಶಕ್ಕೆ ಪಡೆದ ಎಲ್ಲಾ ದಾಖಲೆ ಪತ್ರಗಳನ್ನು ಇಂದು ತಮಗೆ ಒಪ್ಪಿಸುವ ನಿರೀಕ್ಷೆ ಇದೆ' ಎಂದು ಹೇಳಿದ್ದರು. ದಾಖಲೆಗಳು ಆಗಲೇ ಅವರ ಕೈ ಸೇರಿರಬಹುದು. ಅದೇ ರೀತಿಯಾಗಿ ಸಿಓಡಿ ಯವರು, 'ವಾಣಿಜ್ಯ ತೆರಿಗೆ ಇಲಾಖೆಯವರೂ ಕೂಡ ತಮಗೆ ಇಂದು ದಾಖಲಾತಿ ಪತ್ರಗಳನ್ನು ನೀಡಲಿದ್ದಾರೆ' ಎಂದು ಹೇಳಿದ್ದರು. ಆ ದಾಖಲೆಗಳೂ ಕೂಡ ಈಗಾಗಲೇ ಅವರಿಗೆ ಸಿಕ್ಕಿರಬಹುದು ಎಂದು ನಾನು ಭಾವಿಸುತ್ತೇನೆ. ಎಲ್ಲದಕ್ಕಿಂತಲೂ ತುಂಬಾ ವಿಚಿತ್ರವಾದ ಸಂಗತಿ ಎಂದರೆ, 'ಎಪಿಎಂಸಿ ಲೈಸೆನ್ಸ್ ಅಗತ್ಯವಾಗಿದ್ದು, ಆ ವಿಚಾರವಾಗಿಯೂ ಕೂಡ ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದ್ದರು. ಅಂದರೆ ಎಪಿಎಂಸಿ ಲೈಸೆನ್ಸ್ ಅನ್ನು ತೆಗೆದುಕೊಂಡಿಲ್ಲ. ವಾಣಿಜ್ಯ ತೆರಿಗೆ ಇಲಾಖೆಯವರು ಅವರ ಗೇಟ್‌ಗಳಲ್ಲಿ ಫ್ರೀಯಾಗಿ ಬಿಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಷ್ಟೆಲ್ಲಾ ಈ ಹಗರಣದಲ್ಲಿ ನಡೆದಿರುವಂತಹ ಸಂದರ್ಭದಲ್ಲಿ, ಜನ ಸಾಮಾನ್ಯರ ಬಗ್ಗೆ ಕಳಕಳಿ ಇರತಕ್ಕಂಥ ಪತ್ರಿಕೆಗಳೂ ಕೂಡ ತಮ್ಮ ಸಂಪಾದಕೀಯಗಳಲ್ಲಿ ಕೂಡ ಈ ಹಗರಣದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. 'ಪ್ರಜಾವಾಣಿ' ಯಲ್ಲಿ ಏನು ಹೇಳಿದ್ದಾರೆ ಎಂದರೆ,

"ಸೋರಿ ಹೋದ ಬಡವರ ಅಕ್ಕಿ : ಈ ಹಗರಣ ಬರ ಪರಿಹಾರದ ಉಸ್ತುವಾರಿ ವಹಿಸಿದ ಅಧಿಕಾರಿಗಳ ಹಾಗೂ ಬರ ಪರಿಹಾರದ ಮೇಲುಸ್ತುವಾರಿ ನಡೆಸಿದ ಅಧಿಕಾರಸ್ತ ರಾಜಕಾರಣಿಗಳ ಮನೆ ಬಾಗಿಲಿಗೆ ಬಂದು ನಿಂತಿತು."

ಮುಂದುವರೆದು ತುಂಬಾ ಸ್ಪಷ್ಟವಾಗಿ ಇದರಲ್ಲಿ ಅವರು ಹೇಳಿದ್ದಾರೆ.

"ಇದೇನೂ ಸಣ್ಣ ಅಪರಾಧವಲ್ಲ. ಬರ ಪರಿಹಾರವೆಲ್ಲಾ ಕಾಗದದ ಮೇಲೆ ನಡೆದಿದೆ. ವಿತರಣೆಯಾಗಬೇಕಾಗಿದ್ದ ಅಕ್ಕಿ ಸೋರಿ ಹೋಗಿದೆ ಎಂಬುದನ್ನು ಹಗರಣ ಹೇಳುತ್ತಿದೆ. ಈ ಕುರಿತು ಅಮೂಲಾಗ್ರ ತನಿಖೆ ಆಗಬೇಕಾಗಿದೆ."

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಈಶ್ವರಪ್ಪನವರೇ, ತಾವು ಬಹಳ senior member. ತಮಗೆಲ್ಲಾ ಗೊತ್ತಿದೆ. ಹೇಗೆ ಈ ಸದನದಲ್ಲಿ ಒಂದು ವಿಚಾರವನ್ನು ಮಂಡನೆ ಮಾಡುವಾಗ, ನೀವು ಅಥವಾ ಇನ್ನೊಂದರ ಮೇಲೆ rely ಆಗಿ ಅದನ್ನು ಆಧಾರವಾಗಿ ಇಟ್ಟುಕೊಂಡು ಮಾಡಬೇಕು ಎಂದು ಹೇಳುವುದಕ್ಕೆ ಬರುತ್ತದೆ? There are a number of rulings in this regard. ಹಾಗೆ ಮಾಡುವುದಕ್ಕೆ ಬರುವುದಿಲ್ಲ. He cannot rely on newnspapers cuttings and press statements. That will not constitute the subject matter for him to strengthen his case. ತಾವು ಇಷ್ಟೊಂದು ಅನುಭವಸ್ಥರು, ಹಾಗೆ ನಡೆದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ:– ತಕ್ಷಣವೇ ಸಿಓಡಿ ಅಥವಾ ಸಿಬಿಐಗೆ ನೇರವಾಗಿ ದಾಖಲೆಗಳನ್ನು ಕೊಡುವುದಿಲ್ಲ. ತಾವು ಸ್ಪೀಕರ್ ಆಗಿದ್ದವರು. ನಾನು ತಮ್ಮ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ ಪತ್ರಿಕೆಗಳ ಆಧಾರವನ್ನೇ ಕೊಡುವುದು ಸಾಧ್ಯವಿಲ್ಲ ಎನ್ನುವುದು ಹೇಗಾಗುತ್ತದೆ? ಅದು ಸಾಧ್ಯವೇ ಇಲ್ಲ. ಪತ್ರಿಕೆಗಳು ಸರ್ಕಾರವನ್ನು ಎಚ್ಚರಿಕೆ ಮಾಡುವಂತಹ ದೃಷ್ಟಿಯಿಂದ ಅವರು ತಮ್ಮ ಲೈಫ್ ಅನ್ನು ರಿಸ್ಕ್ ಅನ್ನು ರಿಸ್ಕ್ ಇಟ್ಟು ಮಾಡುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ನಾನು ಸನ್ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿಕೊಳ್ಳುವುದು ಇಷ್ಟೇ. ಈ ಸದನದಲ್ಲಿ ನಾವು ಕಲಾಪ ನಡೆಸುವ ವೇಳೆಗೆ, ಇಂತಹ ಗಂಭೀರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡುವಾಗ, ಪತ್ರಿಕಾ ಹೇಳಿಕೆಗಳು, ಪತ್ರಿಕೆಗಳಲ್ಲಿ ಉಲ್ಲೇಖ ಆಗಿರತಕ್ಕಂಥ Articles ಮೇಲೆ ಆಧಾರ ಇಟ್ಟುಕೊಂಡು ನಾವು ಮಾಡಲಿಕ್ಕೆ ಸಾಧ್ಯವಿಲ್ಲ, ನಾವು ಮಾಡಕೂಡದು. ಆ ಕಾರಣಕ್ಕಾಗಿ ಅನೇಕ ಆದೇಶಗಳನ್ನು ಅಧ್ಯಕ್ಷ ಪೀಠ ಈ ಸದನದಲ್ಲಿ ಮೊದಲಿನಿಂದಲೂ ಕೊಟ್ಟಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಇದಕ್ಕೆ ಆಧಾರಗಳು ಯಾವುದು? ವಿರೋಧ ಪಕ್ಷಗಳಿಗೆ ಪತ್ರಿಕೆಗಳೇ ಆಧಾರ. ತಾವು ಪತ್ರಿಕೆಗಳ ಮೇಲೆ ನಂಬಿಕೆ ಇಡಬೇಕಾಗುತ್ತದೆ. ಪತ್ರಿಕೆಗಳ ಸಂಪಾದಕೀಯಗಳು ಇರಬಹುದು, ಅವುಗಳಲ್ಲಿನ ಲೇಖನಗಳು ಇರಬಹುದು, ಅವುಗಳನ್ನು ನಾವು ಯಾವುದೇ ಸಂದರ್ಭದಲ್ಲಿ ಸದನದಲ್ಲಿ ಏನೇ ಚರ್ಚೆಯಾಗಬೇಕಾದರೂ ಉಲ್ಲೇಖ ಮಾಡಬಹುದು. ಬೆಳಿಗ್ಗೆ ನಿಲುವಳಿ ಸೂಚನೆಯೊಂದನ್ನು ಕಳುಹಿಸಬೇಕಾದರೆ, ಪತ್ರಿಕೆಯಲ್ಲಿ ಈ ರೀತಿಯಾಗಿ ಬಂದಿದೆ ಎಂದು ಅದನ್ನೇ ಆಧಾರವಾಗಿಟ್ಟುಕೊಂಡು ನಾವು ಹೇಳಬೇಕಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪತ್ರಿಕೆಗಳೇ ನಮಗೆ ಆಧಾರ. ಅವುಗಳೇ ನಮಗೆ ಪ್ರಾಮುಖ್ಯತೆ. ತಾವು ಅಧ್ಯಕ್ಷರಾಗಿದ್ದಾಗಲೂ ಇದನ್ನು ಹೇಳಿದ್ದೀರಿ, ಆದರೆ ಈಗ ಅದನ್ನು ತಾವು ಮರೆತಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೀಗೆ ಹೇಳಿ ಪತ್ರಿಕೆಯವರನ್ನು ತೆಗೆದು ನನ್ನ ಮೈಮೇಲೆ ಹಾಕಬೇಡಿ. ನನಗೂ ಅವರ ಬಗ್ಗೆ ಗೌರವ ಇದೆ. ನಾನು ಸದನದ ನಿಯಮಾಳಿಗಳನ್ನಷ್ಟೇ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹಿಂದೆ ಅಧ್ಯಕ್ಷರಾಗಿದ್ದಂತಹ ರಮೇಶ್‌ಕುಮಾರ್‌ರವರು ನಮಗೆ ಗೈಡ್ ಮಾಡುತ್ತಾರೆಂದು ನಾವು ಆಗಾಗ್ಗೆ ಕೆಲವೊಂದು ವಿಷಯಗಳನ್ನು ಅವರಿಗೆ ಕೇಳುತ್ತಿದ್ದೆವು. ಈಗ ನೀವು ನಮಗೆ ಮಿಸ್‌ಗೈಡ್ ಮಾಡುತ್ತಿದ್ದೀರಿ ಎಂದು ಅನ್ನಿಸುತ್ತಿದೆ. ಆದ್ದರಿಂದ ಇನ್ನು ಮುಂದೆ ಯಾವುದೇ ಕಾರಣಕ್ಕೂ ನಾವು ನಿಮ್ಮನ್ನು ರೆಫರ್ ಮಾಡುವುದಕ್ಕೆ ಹೋಗುವುದಿಲ್ಲ, ನಿಮ್ಮ ಅಭಿಪ್ರಾಯ ಕೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್):- ಮಾಜಿ ಸ್ಪೀಕರ್ ಆದಂತಹ ಮಾನ್ಯ ರಮೇಶ್ ಕುಮಾರ್‌ರವರು ಪತ್ರಿಕೆಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡಬಾರದು ಎಂದು ಹೇಳುತ್ತಿದ್ದಾರೆ. ಹಾಗಾದರೆ ಮಾನ್ಯ ಈಶ್ವರಪ್ಪನವರು 'ಕೂಲಿಗಾಗಿ ಕಾಳು' ಬಗ್ಗೆ ಮಾತನಾಡಬೇಕಾದರೆ ಅವರು ಕೂಲಿ ಕೆಲಸಕ್ಕೆ ಹೋಗಬೇಕಾಗುತ್ತದೆ. How can he prove practically? It was happened in my place also. They have taken all the rice, mad a big function as if they have given from their own party and then distributed ಇದು ಪ್ರೂವ್ ಆದರೆ ಅರ್ಧ ಇಂಜಿನಿಯರ್‌ಗಳು dismiss ಆಗಿ ಹೋಗುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಒಂದು ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಸನ್ಮಾನ್ಯ ಮಂತ್ರಿಗಳಾದ ಹೆಚ್.ಡಿ. ರೇವಣ್ಣನವರು ಒಂದು ಮಾತನ್ನು ಹೇಳಿದ್ದಾರೆ. ಜಿಲ್ಲಾಧಿಕಾರಿಗಳ ಹತ್ತಿರ ದಾಖಲೆ ಸಮೇತ ಬಂದಿರುವುದರಿಂದ, ಆ ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆಂದು ಅವರು ಹೇಳಿದ್ದಾರೆ.

ಈಗ ಒತ್ತಾಯ ಮಾಡಿದ್ದು ಪ್ರಶ್ನೆ ಆಗಿದೆ. ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ ಎಂದರೆ, ಜಿಲ್ಲಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೆ ಅವಕಾಶ ಇದೆ. ಅವರನ್ನು ಸಸ್ಪೆಂಡ್ ಮಾಡಿ, ಅನೇಕ ಮಂತ್ರಿಗಳು ಮತ್ತು ಶಾಸಕರು ಇದ್ದಾರೆನ್ನುವ ಪ್ರಶ್ನೆ ಇದೆ. ಯಾವ ಯಾವ ಮಂತ್ರಿಗಳು ಇದ್ದಾರೆ, ಯಾವ ಯಾವ ಶಾಸಕರು ಇದ್ದಾರೆಂದು ಪ್ರಶ್ನೆ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಕಾಂಗ್ರೆಸ್ ಸರ್ಕಾರದಲ್ಲಿ ಇದ್ದ ಅನೇಕ ಶಾಸಕರು ಮತ್ತು ಕಾಂಗ್ರೆಸ್ ಸರ್ಕಾರದಲ್ಲಿದ್ದ ಅನೇಕ ಜನ ಮಂತ್ರಿಗಳು ಇದರಲ್ಲಿ ಶಾಮೀಲಾಗಿದ್ದಾರೆಂದು ದಾಖಲೆಗಳಿಂದ ಮತ್ತು ಸಿಓಡಿ ಮುಖಾಂತರ ಸಿಗುವ ಅವಕಾಶ ಇದೆ. ಸಿಓಡಿಯವರು ಈಗಾಗಲೇ ಒಂದು ಅವಕಾಶ ಕೊಟ್ಟಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳಿಗೂ ಪ್ರಾರ್ಥನೆ ಮಾಡುತ್ತೇನೆ, ಈ ರೀತಿ ಇದನ್ನು ಮುಂದೆ ಹಾಕುತ್ತಾ ಹೋಗುವುದರಿಂದ ಯಾವ ರೀತಿ ನಕಲಿ ಛಾಪಾ ಕಾಗದ ಹಗರಣದಲ್ಲಿ ಲೂಟಿ ಮಾಡಿದ ವ್ಯಕ್ತಿಗಳು ಇವತ್ತಿಗೂ ತಪ್ಪಿಸಿಕೊಂಡು ಓಡಾಟ ಮಾಡುತ್ತಿದ್ದಾರೇ ಅಂತಹ ಭ್ರಷ್ಟರಿಗೆ ಇವರು ಅವಕಾಶ ಮಾಡಿ ಕೊಟ್ಟ ಹಾಗಾಗುತ್ತದೆ. ತುರ್ತಾಗಿ ಇವರಿಗೆ ಏನು ಸಿಓಡಿ ರಿಪೋರ್ಟ್ ಸಿಕ್ಕಿದೆ, ಅದರ ಮುಖಾಂತರ ಯಾರ್‍ಯಾರನ್ನು ಆರೆಸ್ಟ್ ಮಾಡಬೇಕು, ಯಾವ ಶಾಸಕರಿಗೆ ಆರೆಸ್ಟ್ ಮಾಡಬೇಕು, ಯಾವ ಜಿಲ್ಲಾಧಿಕಾರಿಗಳಿಗೆ ಆರೆಸ್ಟ್ ಮಾಡಬೇಕು, ಯಾವ ಮಂತ್ರಿಗಳಿಗೆ ಆರೆಸ್ಟ್ ಮಾಡಬೇಕು, ಆ ದಿಕ್ಕಿನಲ್ಲಿ ತಕ್ಷಣ ಪ್ರಯತ್ನ ಮಾಡಲಿ. ಇಲ್ಲದಿದ್ದರೆ ರಾಜ್ಯದಲ್ಲಿ

ವಿರೋಧ ಪಕ್ಷದವರು ಕೂಗುತ್ತಾ ಇರುತ್ತಾರೆ, ಲೂಟಿ ಮಾಡಿದ ಶಾಸಕರು ಮತ್ತು ಮಂತ್ರಿಗಳು ಮಾಡುತ್ತಾ ಹೋಗುತ್ತಾರೆ ಎನ್ನುವ ಪ್ರಶ್ನೆ ಬರುತ್ತದೆ. ಹಾಗಾಗಿ ಇವತ್ತು ನಾವು ಮನವಿ ಮಾಡುವುದು ಇಷ್ಟೆ. ಇಡೀ ಕರ್ನಾಟಕ ರಾಜ್ಯದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಈ ರೀತಿ ಲೂಟಿ ಆಗಿದೆ. ಬಡವರ ಹೊಟ್ಟೆಗೆ ಹೋಗಬೇಕಾದ ಅನ್ನ ರಾಜಕಾರಣಿಗಳ ಮತ್ತು ಉನ್ನತಾಧಿಕಾರಿಗಳ ಜೇಬಿಗೆ ಹೋಗಿದೆ. ದಯವಿಟ್ಟು ತಕ್ಷಣ ಈ ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಸಂಬಂಧಪಟ್ಟ ವ್ಯಕ್ತಿಗಳು ಯಾರಿದ್ದಾರೆ ಅವರು ಪೂರ್ಣ ಹೊರಗಡೆ ಬರುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಹೇಳಿ, ದಯಮಾಡಿ ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿ ಕೊಡಬೇಕೆಂಬುದು ನನ್ನ ಪ್ರಾರ್ಥನೆ.

ಶ್ರೀ ಬಿ. ಬಸವಣ್ಣಪ್ಪ (ಹೊಳೆಹೊನ್ನೂರು): ಮಾನ್ಯ ಅಧ್ಯಕ್ಷರೆ, ಕೂಲಿಗಾಗಿ ಕಾಳು ಯೋಜನೆ ಅತ್ಯಂತ ಪ್ರಮುಖ ಯೋಜನೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಡವರು ಕೃಷಿ ಕಾರ್ಮಿಕರು ಏನಿದ್ದಾರೆ, ನಿರುದ್ಯೋಗಿಗಳು ಏನಿದ್ದಾರೆ ಅವರಿಗೆ ಸ್ಥಳೀಯವಾಗಿ ಉದ್ಯೋಗ ಕೊಡತಕ್ಕಂತಹ ಯೋಜನೆ. ತಮಗೆ ತಿಳಿದ ಹಾಗೆ ಕಳೆದ ಮೂರು ವರ್ಷಗಳಿಂದ ಭೀಕರ ಬರಗಾಲದಿಂದ ಕೃಷಿಕರು ಮತ್ತು ರೈತರು ಬೀದಿ ಪಾಲಾಗಿದ್ದಾರೆ. ರಾಜ್ಯ ಸರ್ಕಾರ ಈ ಒಂದು ಜನತೆ ಬಗ್ಗೆ, ರೈತರ ಬಗ್ಗೆ ಮತ್ತು ಕೃಷಿ ಕಾರ್ಮಿಕರ ಬಗ್ಗೆ ಏನೂ ಗಮನ ಹರಿಸಿಲ್ಲ. ಕೇಂದ್ರ ಸರ್ಕಾರದ ಈ ಕೂಲಿಗಾಗಿ ಕಾಳು ಯೋಜನೆ ಏನಿದೆ ಬಹಳ ಮುಖ್ಯವಾಗಿ ಯೋಜನೆ. ಲಕ್ಷಾಂತರ ಟನ್ ಅಕ್ಕಿ ಬಂದಿತ್ತು, ಅದು ದುರುಪ ಯೋಗವಾಗಿದೆ. ಈಗ ನಾನು ಒಂದು ಕ್ಷೇತ್ರವನ್ನು ಪ್ರತಿನಿಧಿಸಿ ಬಂದಿದ್ದೇನೆ, ನನ್ನ ಕ್ಷೇತ್ರದಲ್ಲಿ ಇದರ ಬಗ್ಗೆ ಏನೇನಾಗಿದೆ ಎಂದು ನಾನು ಹೇಳುತ್ತೇನೆ. ನೀವು ನಿಲುವಳಿ ಸೂಚನೆಗೆ ಒಪ್ಪಿದ ಮೇಲೆ ಎಲ್ಲಾ ವಿಷಯಗಳನ್ನು ಮಂಡಿಸುತ್ತೇನೆ. ದಯವಿಟ್ಟು ನಿಲುವಳಿ ಸೂಚನೆಯನ್ನು ನೀವು ಅಂಗೀಕರಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರೂ ಮುಖ್ಯ ಮಂತ್ರಿಗಳೂ ಇಲ್ಲಿದ್ದಾರೆ. ತಾವು ಇದರ ಬಗ್ಗೆ ಏನು ತೀರ್ಮ ತೆಗೆದುಕೊಳ್ಳುತ್ತೀರಿ ಅದಕ್ಕೆ ನಾವು ತಲೆಬಾಗುತ್ತೇವೆ. ರೂಲ್ 60 ಆಗುವುದಿಲ್ಲ, ಬೇರೆ ರೀತಿ ನಿಯಮ 69ರಲ್ಲಿ ಕನ್‌ವರ್ಟ್ ಮಾಡುತ್ತೇವೆ ಚರ್ಚೆ ಪ್ರಾರಂಭ ಮಾಡಿ ಎಂದು ಹೇಳಿದರೆ ನಮ್ಮದು ಅಭ್ಯಂತರವಿಲ್ಲ. ನಾನು ಸಭಾ ನಾಯಕರಲ್ಲಿ ವಿನಂತಿ ಮಾಡುವುದು, ನಾವು ಇದು ಸಮಾಧಾನಕ್ಕೆ ಪತ್ರಿಕೆಯಲ್ಲಿ ಬರುವುದಕ್ಕೋಸ್ಕರ ಚರ್ಚೆ ಮಾಡುತ್ತಿಲ್ಲ. ಗಂಭೀರವಾದ ವಿಷಯ. ಮಾನ್ಯ ವಾಟಾಳ್‌ನಾಗರಾಜ್ ರವರು ಹೇಳಿದಂತೆ ಇದು ದೊಡ್ಡ ಮೇವಿನ ಹಗರಣಕ್ಕೆ ಹೋಲಿಕೆ ಮಾಡಿದರೆ. ಇದು ಬಹಳ ದೊಡ್ಡ ಹಗರಣ. ನಮಗೆ ಬೇಕಾಗಿರುವುದು ಪರಿಹಾರ. ಇದುವರೆಗೆ ಯಾರೂ ಜೈಲಿಗೆ ಸೇರಿಲ್ಲ, ಯಾವ ಅಧಿಕಾರಿಗಳು ಮನೆಗಳಿಗೆ ಹೋಗಿಲ್ಲ. ಯಾರಿಗೂ ಪನಿಷ್‌ಮೆಂಟ್ ಆಗಿಲ್ಲ. ಸಸ್ಪೆಂಡ್ ಆಗಿದ್ದರೆ ನಮಗೆ ಅದರಿಂದ ಏನೂ ಲಾಭವಾಗುವುದಿಲ್ಲ. ಅಧಿಕಾರಿಗಳು ದೊಡ್ಡ ಪ್ರಮಾಣದಲ್ಲಿ ಶಾಮೀಲಾಗಿದ್ದಾರೆಂದು ಹೇಳಿದ್ದಾರೆ. ಆಶ್ಚರ್ಯ ತರುವ ಸಂಗತಿ ಇದರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಎಡಿಟೋರಿಯಲ್ ಬಂದಿದೆ. ಸಂಯುಕ್ತ ಕರ್ನಾಟಕದ ಒಂದು ಎಡಿಟೋರಿಯಲ್‌ನಲ್ಲಿ 10,000 ಮೆಟ್ರಿಕ್ ಟನ್‌ನಷ್ಟು ಅಕ್ಕಿ ರೈಲುಗಳಲ್ಲಿ ಬಂದು ಹಾಸನದ ಗೋದಾಮುಗಳಿಂದ ನೇರವಾಗಿ

ಹಡಗುಗಳಿಗೆ ತುಂಬಲಿಕ್ಕೆ ಮಂಗಳೂರಿನ ಹತ್ತಿರ ಸಿಕ್ಕಿರುವುದು ಕಂಡುಬಂದಿದೆ. ಸರ್ಕಾರಿ ಯಂತ್ರವೂ ಇದರಲ್ಲಿ ಶಾಮೀಲಾಗಿರುವ ಸಂಗತಿ ಇದೆ ಎಂದು ಗೊತ್ತಾಗಿದೆ. ಜನ ಆಶ್ಚರ್ಯದಿಂದ ಸರ್ಕಾರ ಇದೆಯೋ ಇಲ್ಲವೋ, ಚುನಾಯಿತ ಪ್ರತಿನಿಧಿಗಳು ಇದ್ದಾರೋ ಇಲ್ಲವೋ ಎಂಬ ಅನುಮಾನಕ್ಕೆ ಬರುವಂತಾಗಿದೆ. ಇನ್ನೊಂದು ಪಡಿತರ ವ್ಯವಸ್ಥೆಯಲ್ಲಿ 28 ಕೆಜಿ ಅಕ್ಕಿ ಕೊಡುವ ಕಡೆ 15 ರಿಂದ 16 ಕೆಜಿ ಕೊಡುತ್ತಿಲ್ಲ. ಗೋಧಿ ಕೊಟ್ಟೇ ಇಲ್ಲ. ಇವೆಲ್ಲಾ ಕಳ್ಳ ಸಾಗಾಣಿಕೆ ಆಗುತ್ತಿದೆ. ಪಡಿತರ ವ್ಯವಸ್ಥೆಯಲ್ಲಿ ಕಳೆದ ನಾಲ್ಕೈದು ತಿಂಗಳುಗಳಿಂದ ಎಲ್ಲೆಲ್ಲಿ ಸಮರ್ಪಕವಾಗಿ ವಿತರಣ ಆಗಿದೆ, ಎಲ್ಲೆಲ್ಲಿ ವಿತರಣೆ ಆಗಿಲ್ಲ, ಬಿಡುಗಡೆ ಆದ ಅಕ್ಕಿ ಗೋಧಿ ಎಲ್ಲಿಗೆ ಹೋಯಿತು? ಇದುವರೆಗೆ ಸಿಒಡಿಯವರು ಏನು ತನಿಖೆ ಮಾಡಿದ್ದಾರೆ, ಏನೇನು ವರದಿ ಅವರ ಕೈಗೆ ಸಿಕ್ಕಿದೆ, ಇವೆಲ್ಲಾ ವಿವರಗಳ ಆಧಾರದ ಮೇಲೆ ನಾವು ಮುಂದೆ ಏನು ಮಾಡಬೇಕೆಂದು ಒಟ್ಟಿಗೆ ಕೂತು ತೀರ್ಮಾನ ಮಾಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್: ದರೋಡೆ ಲೂಟಿ ಎಲ್ಲಾ ಆಗಿ ಹೋಗಿದೆ. ಅದಕ್ಕೆ ಅವರು ಏನು ಹೇಳುತ್ತಾರೆಂದು ಕೇಳಿಕೊಳ್ಳೋಣ. ಚರ್ಚೆಗೆ ಅವಕಾಶ ಕೊಟ್ಟಿರುವುದು ಅದಕ್ಕೋಸ್ಕರ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮುಂದೆ ತಾವು ವಿವರವಾದ ಚರ್ಚೆಗೆ ಹೋಗಬೇಕೆಂದು ಅವಕಾಶ ಕೊಡುತ್ತೀರಿ ಅದಕ್ಕೆ ನಾವು ತಲೆ ಬಾಗುವುದಕ್ಕೆ ಸಿದ್ದರಿದ್ದೇವೆ. ಚರ್ಚೆ ಒಂದು ಘಟ್ಟಕ್ಕೆ ಬಂದು ಪರಿಹಾರ ಸಿಗಬೇಕು. ಇದು ನಮ್ಮ ಉದ್ದೇಶ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ನೀವು ಸಿಗ್ನೇಟರೀಸ್‌ಗೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ, ನನ್ನದು ವಿನಂತಿ ಏನೆಂದರೆ, ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು, ಬಿಡಬೇಕು ಎಂದು ತಮ್ಮ ಮನವೊಲಿಸುವುದಕ್ಕೆ ಮೊದಲನೇ ಸಾಲಿನಲ್ಲಿ ಇರುವ ಎಲ್ಲಾ ವಿರೋಧ ಪಕ್ಷಗಳ ಮುಖಂಡರು ಮಾತನಾಡಿದ್ದಾರೆ. ಇದು ಇಷ್ಟಕ್ಕೇ ಮುಗಿಯುವುದಿಲ್ಲವೆಂಬುದು ನನಗೆ ಗೊತ್ತು. ಅವರಿಗೂ ಮನವರಿಕೆಯಾಗಿದೆ. ಬೇರೆ ತರಹದಲ್ಲಿ ಅಥವಾ ನಿಲುವಳಿ ಸೂಚನೆಗೆ ಅವರು ತಮ್ಮ ಮನವೊಲಿಸಿದ್ದರೆ ಕೊಡಿ. ಮಾನ್ಯ ಸಭಾ ನಾಯಕರು ಹೇಳಿದ್ದಾರೆ, ನಾನು ಎಲ್ಲಾ ತರಹದ ತನಿಖೆಗೆ ತಯಾರಿದ್ದೇನೆ, ಎಲ್ಲ ತರಹದ ಚರ್ಚೆಗೂ ತಯಾರಿದ್ದೇನೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಪ್ರಾಕ್ಟಿಕಲ್ಲಾಗಿ ಮಾತನಾಡುವಾಗ ನಾವೆಲ್ಲಾ ಆ ಕಮಿಟಿ ಅಧ್ಯಕ್ಷರಾಗಿದ್ದವರು. ರಿಲೀಫ್ ವರ್ಕ್ಸ್‌ಗೆ ಲೆಜಿಸ್ಲೇಟರ್ಸ್ ಅಧ್ಯಕ್ಷರಾಗಿದ್ದವರು. ಅಲ್ಟಿಮೇಟ್‌ಲಿ ಮಾಧುಸ್ವಾಮಿಯವರು ಹೇಳಿದ ಹಾಗೆ ಒಂದು ಪ್ರಾಕ್ಟಿಕಲ್ ಸಲ್ಯೂಷನ್ ಹುಡುಕಬೇಕಾಗುತ್ತದೆ. ಅದು ಏನಿದೆ ಎಂದು ನಾವು ಚರ್ಚೆ ಮಾಡೋಣ. ಪ್ರಿಲಿಮಿನರಿ ಸಬ್ಮಿಷನ್ ಇಷ್ಟಕ್ಕೇ ಮುಗಿಸಿ ತಾವು ಬೇರೆ ರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ಕಾರ್ಯಕಲಾಪಗಳಿಗೆ ಅವಕಾಶ ಮಾಡಿ ಕೊಡುವುದು ಸೂಕ್ತವೆಂದು ಸರ್ಕಾರದ ಸಲಹೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಸೀಜ್ ಆಗಿದ್ದ ಗೋಧಿಯ ಎಲ್ಲಾ ವಿವರವನ್ನು ಬಹಿರಂಗಪಡಿಸಿ ಅವರು ತಮ್ಮ ಪ್ರಾಣದ ರಿಸ್ಕ್ ತೆಗೆದುಕೊಂಡು ಜನರ ಹಿತದೃಷ್ಟಿಯಿಂದ ಓಡಾಡಿದ್ದಾರೆ. 2-3 ನಿಮಿಷ ಅವರು ಹೇಳುತ್ತಾರೆ ನಂತರ ನೀವು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– Sir I am on a point & order, ನಾನು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯಾಗಿರುವುದರಿಂದ ಇಂತಹ ವಿಚಾರಗಳಲ್ಲಿ ಸದನದ ಗಮನಕ್ಕೆ ತರುವುದು ನನ್ನ ಕರ್ತವ್ಯ ಇದೆ. ಮಾನ್ಯ ಅಧ್ಯಕ್ಷರೆ, ತಾವು ಬಹಳ ಉದಾರವಾಗಿ ಅನೇಕ ಜನಗಳಿಗೆ ಮಾತನಾಡುವ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಈ ವಿವೇಚನೆ ಬಗ್ಗೆ ನಮ್ಮ ತಕರಾರು ಇಲ್ಲ. ಎಲ್ಲರೂ ಹೊಸದಾಗಿ ಈ ಸದನಕ್ಕೆ ಬಂದಿರುವುದರಿಂದ ಪ್ರಸ್ತಾಪ ಮಾಡತಕ್ಕಂತಹ ವಿಷಯದ ಬಗ್ಗೆ ಕೂಡ ಯಾವುದೇ ತಕರಾರು ಇಲ್ಲ. ಆದರೆ ಮುಖ್ಯವಾಗಿ ಇರತಕ್ಕಂಥದ್ದು ಈ ಸದನವನ್ನು ನಮ್ಮ ನಿಯಮಾವಳಿ ಪ್ರಕಾರ ನಡೆಸಿಕೊಂಡು ಹೋಗಬೇಕಾದುದು ಬಹಳ ಮುಖ್ಯ. ಸದನದಲ್ಲಿ ಯಾರ್ಯಾರು ಈ ನಿಲುವಳಿ ಸೂಚನೆಗೆ ಸಹಿ ಹಾಕಿ ಕೊಟ್ಟಿರುತ್ತಾರೆ ಅವರೆಲ್ಲರಿಗೂ ಮಾತನಾಡಬೇಕೆಂದು ಏನಿದೆ ಅದು ನಿಜವಾಗಿಯೂ ಕೂಡ ನಿಯಮಾವಳಿಯಲ್ಲಿ ಆ ತರಹ ಇಲ್ಲ. ಆ ಕಾರಣಕ್ಕಾಗಿ ನಮ್ಮಲ್ಲಿ 2000ನೇ ಇಸವಿಯಲ್ಲಿ ಸಭಾಧ್ಯಕ್ಷರ ನಿರ್ದೇಶನಗಳು ಎಂದು ತಾವು ಮಾಡಿದ್ದೀರಿ. "ಸಭಾಧ್ಯಕ್ಷರ ನಿರ್ದೇಶನದಲ್ಲಿ ನಿಲುವಳಿ ಸೂಚನೆ ಅಥವಾ ಹಕ್ಕುಚ್ಯುತಿ ಪ್ರಶ್ನೆ ಮಂಡಿಸಲಿಕ್ಕೆ ಸದನದ ಅನುಮತಿ ಕೋರುವ ವಿಧಾನ–ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 69ರ ಮುಂದೆ ನಿಲುವಳಿ ಸೂಚನೆ ಅಥವಾ ನಿಯಮ 190ರ ಮೇರೆಗೆ ಹಕ್ಕುಚ್ಯುತಿ ಪ್ರಶ್ನೆ ಮಂಡಿಸಲು ಅನುಮತಿ ನೀಡುವ ಬಗ್ಗೆ ಸದಸ್ಯರ ಅಭಿಪ್ರಾಯಗಳನ್ನು ಕೇವಲ ಮಾನ್ಯ ಅಧ್ಯಕ್ಷರು ತೀರ್ಮಾನಿಸಿದಲ್ಲಿ ಸದರಿ ಸೂಚನೆಗೆ ಸಹಿ ಮಾಡಿರುವ ಮೂವರು ಸದಸ್ಯರು ಮಾತ್ರ ಪ್ರಾರಂಭಿಕ ನಿವೇದನೆಗಳನ್ನು ಮಾಡಬಹುದು" ಇಲ್ಲಿ ಸದನದ ಸಮಯ ಅತ್ಯಂತ ಅಮೂಲ್ಯವಾಗಿರತಕ್ಕಂಥದ್ದು. ಮೊದಲು ತಮಗೆ ಮನವೊಲಿಸುವ ಪ್ರಯತ್ನವನ್ನು ಈ ನಿಲುವಳಿ ಸೂಚನೆ ಮೂಲಕ ಮಾಡುತ್ತಾರೆ. ನಿಲುವಳಿ ಸೂಚನೆ ಮೂಲಕ ಮಾಡಿದ ನಂತರ ತಾವು ಏನಾದರೂ ತಮ್ಮ ವಿವೇಚನೆಯಿಂದ ತಮ್ಮ ಒಟ್ಟಿಗೆ ಕೊಟ್ಟರೆ, ಅಥವಾ ಬೇರೆ ಒಂದು ರೂಪದಲ್ಲಿ ತೆಗೆದುಕೊಳ್ಳಬೇಕೆಂದು ನಿರ್ಧಾರವಾದರೆ ಅದರ ಮೂಲಕ ಚರ್ಚೆಯಲ್ಲಿ ಭಾಗವಹಿಸುವಂತಹ ಅವಕಾಶ ಎಲ್ಲಾ ಸದಸ್ಯರಿಗೆ ಇರುತ್ತದೆ. ಆದರೆ ಇಲ್ಲಿ ತಮ್ಮ ಮನವೊಲಿಸಲಿ ನೀವು ನಿಲುವಳಿ ಸೂಚನೆಗೆ ಸಹಿ ಮಾಡಿದ್ದೀರಿ ಎನ್ನುವಂತಹ ಕಾರಣಕ್ಕಾಗಿ ಯಾರಿಗೂ ಅಧಿಕಾರ ಸಿಗುವುದಿಲ್ಲ. ಮೂರು ಜನರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ. ಆ ದೃಷ್ಟಿಯಲ್ಲಿ ಮಾನ್ಯ ಯಡಿಯೂರಪ್ಪನವರು ಮಾತನಾಡಿದ್ದಾರೆ, ಜಗದೀಶ್‌ಶೆಟ್ಟರ್‌ರವರು ಮಾತನಾಡಿದ್ದಾರೆ, ಮಾನ್ಯ ಜ್ಞಾನೇಂದ್ರರವರು ಮಾತನಾಡಿದರು, ಅದರಂತೆ ಬೇರೆ ನನ್ನ ಸ್ನೇಹಿತರೂ ಕೂಡ ಮಾತನಾಡಿ ನಾನು ಆಕ್ಷೇಪಣೆ ಮಾಡುತ್ತಿಲ್ಲ. ಯಾರಾದರೂ ನಾಲ್ಕು ಜನ ಹಿರಿಯ ಸದಸ್ಯರು ಮಾತನಾಡುತ್ತಾ ರೆಂದರೆ ಮಾತನಾಡಲಿ ಎಂದು ಇದ್ದೆ. ಈ ರೀತಿಯಾಗಿ ಇಡೀ ಸದನದ ಕಲಾಪಗಳನ್ನು ಇಷ್ಟು ಅನಿಯಮಿತ ಅವಧಿಯವರೆಗೆ ತೆಗೆದುಕೊಂಡು ಹೋದರೆ ಎಷ್ಟು ದೊಡ್ಡ ಪ್ರಮಾಣದಲ್ಲಿ ನಾವು ಖರ್ಚು ಮಾಡುತ್ತೇವೆ, ಮುಖ್ಯವಾದ ವಿಷಯಕ್ಕೆ ಬಂದಿಲ್ಲ, ತಾವು ತಮ್ಮ ವಿವೇಚನೆ ಉಪಯೋಗಿಸಿ ಕೊಂಡು ಇದರಲ್ಲಿ ಯಾವುದು ಒಪ್ಪಿದ್ದೀರಿ ಎಂದರೆ ಚರ್ಚೆಗೆ ಬೇಕಾದಷ್ಟು ಅವಕಾಶ ಕೊಡಿ, ಚರ್ಚೆಗೆ ಅನೇಕ ತಮ್ಮ ಗೆಳೆಯರು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮಾನ್ಯ ಕಟ್ಟಾಸುಬ್ರಹ್ಮಣ್ಯನಾಯ್ಡುರವರು ಮಾನ್ಯ ಸದಸ್ಯರು ಅವರ ಜೊತೆ ಹೋಗಿದ್ದಾರೆ ಎಂದರೆ ಅವರಿಗೆ

ವೈಯಕ್ತಿಕ ಮಾಹಿತಿಗಳು ಇರುತ್ತವೆ. ಆ ಮಾಹಿತಿಗಳನ್ನು ಕೂಡ ಚರ್ಚೆಯ ಸಮಯದಲ್ಲಿ ಬಹಿರಂಗಪಡಿಸಬಹುದು. ತಾವು ಸಮಯವನ್ನು ನಿಗದಿ ಮಾಡುತ್ತೀರಿ ಆ ಸಮಯದಲ್ಲಿ ಬಿಜೆಪಿಗೆ ಎಷ್ಟು ಸಮಯ ಸಿಗುತ್ತದೆ ನೋಡಿಕೊಂಡು ಅದರಲ್ಲಿ ಯಾರ್ಯಾರಿಗೆ ಮಾಹಿತಿ ಇರುತ್ತದೆ ಅವರಿಗೆ ಹೆಚ್ಚಿನ ಸಮಯವನ್ನು ಕೊಡಲಿ. ಆದರೆ ಈ ಸಮಯದಲ್ಲಿ ತಮ್ಮ ಅವಗಾಹನೆಗೆ ಮತ್ತು ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಪ್ರಾಯಶಃ ದಯವಿಟ್ಟು ಇದನ್ನು ಇಲ್ಲಿಗೇ ನಿಲ್ಲಿಸಿ ತಾವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದ್ದು. ಏಕೆಂದರೆ, ನಾವೇ ಮಾಡಿದಂತಹ ನಿರ್ಣಯವನ್ನು ನಾವೇ ಉಲ್ಲಂಘನೆ ಮಾಡತಕ್ಕದ್ದು ಸಭೆಗೆ ಭೂಷಣ ಪ್ರಾಯ ಅಲ್ಲ. ಮತ್ತೊಂದು ಸಾರಿ ತಮಗೆ ಹೇಳಬೇಕೆಂದರೆ, ಸದರಿ ಸೂಚನೆಗೆ ಸಹಿ ಮಾಡಿರುವ ಮೂವರು ಸದಸ್ಯರು ಮಾತ್ರ ಪ್ರಾರಂಭಿಕ ನಿವೇದನೆ ಮಾಡಬಹುದು ಎಂದು ಇರುವುದರಿಂದ ದಯವಿಟ್ಟು ನಿಯಮಾವಳಿಗಳ ಪ್ರಕಾರ ಇಲ್ಲಿಗೆ ನಿಲ್ಲಿಸಿ. ನಾಯ್ಡುರವರೇ, ನಾನು ತಮಗೆ ಮಾತನಾಡುವುದಕ್ಕೆ ಅಡ್ಡ ಬಂದಿದ್ದೇನೆಂದು ಭಾವಿಸಬೇಡಿ.

ಅಧ್ಯಕ್ಷರು:– ಈಗ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರುಗಳು ಏನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ಅದು ಗಂಭೀರ ಸ್ವರೂಪದ್ದಾಗಿದೆ. ಆದುದರಿಂದ ಈ ವಿಷಯವನ್ನು ನಿಯಮ 69ರಡಿಯಲ್ಲಿ ಚರ್ಚೆ ಮಾಡಲು ಅನುಮತಿಯನ್ನು ನೀಡಿ ನಿಲುವಳಿ ಸೂಚನೆಗೆ ನನ್ನ ಒಪ್ಪಿಗೆಯನ್ನು ನಿರಾಕರಿಸಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಯಾವ ನಿಯಮದಡಿಯಲ್ಲಿ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು:– ನಿಯಮ 69ರಡಿಯಲ್ಲಿ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು:– ನಾಳೆಯೇ ಫಿಕ್ಸ್ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆ ಫಿಕ್ಸ್ ಮಾಡಿ ನಿಯಮ 69ರಡಿಯಲ್ಲಿ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು:– ಹೌದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆಯೇ ಅಜೆಂಡಾದಲ್ಲಿ ಅದು ಬರುವ ಹಾಗೆ ಮಾಡಿ. ಏಕೆಂದರೆ ವಿಷಯದ ಮಹತ್ವ ವಿಳಂಬವಾದ ಹೊರಟು ಹೋಗುತ್ತದೆ.

ಅಧ್ಯಕ್ಷರು:– ನಾಳೆಯೇ ತೆಗೆದುಕೊಳ್ಳುತ್ತೇನೆ.

11. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

ಡಾ: ಜಿ. ಪರಮೇಶ್ವರ (ಮಧುಗಿರಿ):– ಮಾನ್ಯ ಅಧ್ಯಕ್ಷರೆ,

"ದಿನಾಂಕ 11–6–2004 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ತಮ್ಮ ಅಪ್ಪಣೆ ಕೋರುತ್ತೇನೆ."

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಈಗ ಆದ ಒಂದು ಸಣ್ಣ ಲೋಪಕ್ಕಾಗಿ ತಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ. ನಮ್ಮ